2016 ಕ.ತೀ.ವ 757

## ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಮೋಹನ್ ಎಂ. ಶಾಂತನಗೌಡರ್
## ಮತ್ತು
## ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಬೂದಿಹಾಳ್ ಆರ್.ಬಿ.

### ವೆಂಕಟೇಶ @ ಪೂರಿ ಮತ್ತು ಇತರರು –ವಿರುದ್ಧ– ಹಳೆಯ ಪಟ್ಟಣ ಪೊಲೀಸ್ ಠಾಣೆ, ಭದ್ರಾವತಿ ತಾಲ್ಲೂಕು ಇವರ ಮೂಲಕ ಕರ್ನಾಟಕ ಸರ್ಕಾರ*

ಕ್ರಿಮಿನಲ್ ಪ್ರಕ್ರಿಯಾ ಸಂಹಿತೆ, 1973, 374 (2)ನೇ ಪ್ರಕರಣದ ಮೇರೆಗಿನ ಅಪೀಲು.

ದಂಡ ಪ್ರಕ್ರಿಯಾ ಸಂಹಿತೆಯ 161ನೇ ಪ್ರಕರಣದ ಮೇರೆಗೆ ಪೊಲೀಸರಿಂದ ಪ್ರತ್ಯಕ್ಷ ಸಾಕ್ಷಿದಾರರ ಹೇಳಿಕೆಗಳನ್ನು ತಡವಾಗಿ ದಾಖಲು ಮಾಡಿಕೊಳ್ಳಲಾಗಿದೆ ಎಂಬ ಆಧಾರದ ಮೇಲೆ ಈ ಕ್ರಿಮಿನಲ್ ಅಪೀಲುಗಳನ್ನು ಸಲ್ಲಿಸಲಾಗಿದೆ.

ಪ್ರತ್ಯಕ್ಷ ಸಾಕ್ಷ್ಯವು, ಸ್ಥಿರ, ತರ್ಕಬದ್ಧ ಮತ್ತು ನಂಬಲರ್ಹವಾಗಿರುವಾಗ ಕಾನೂನಿನ ನಿಲುವಿನಂತೆ ದಂಡ ಪ್ರಕ್ರಿಯಾ ಸಂಹಿತೆಯ 161ನೇ ಪ್ರಕರಣದ ಮೇರೆಗೆ ತನಿಖೆಯ ಅವಧಿಯಲ್ಲಿ ತನಿಖಾಧಿಕಾರಿಯು ಸಾಕ್ಷ್ಯಗಳ ಹೇಳಿಕೆಯನ್ನು ತಡವಾಗಿ ದಾಖಲಿಸಿಕೊಂಡರೆಂಬ ಕಾರಣ ಮಾತ್ರದಿಂದಲೇ ಪಾಟೀಸವಾಲಿನಲ್ಲಿ ಅವರು ಸೌಹಾರ್ದಯುತವಾಗಿದ್ದಲ್ಲಿ ಅವರ ಸಾಕ್ಷ್ಯವು ಅನ್ಯಥಾ ನಂಬಲರ್ಹವಾಗಿದ್ದಲ್ಲಿ ಮತ್ತು ದಾಖಲೆಯಲ್ಲಿರುವ ಇತರ ಸಾಕ್ಷ್ಯವನ್ನು ದೃಢಪಡಿಸುವಂತಿದ್ದಲ್ಲಿ ಅವರ ಸಾಕ್ಷ್ಯವನ್ನು ತಿರಸ್ಕರಿಸಲಾಗುವುದಿಲ್ಲ.

(ಎ) ಈ ಸಾಕ್ಷೀದಾರರ ಹೇಳಿಕೆಗಳನ್ನು ಪ್ರಶ್ನಿತ ಘಟನೆಯ ಸುಮಾರು 40 ದಿನಗಳ ತರುವಾಯ ದಾಖಲಿಸಿಕೊಂಡಿದೆಯೆಂಬುದರಲ್ಲಿ ಯಾವುದೇ ಸಂಶಯವಿರುವುದಿಲ್ಲ. ಸಾಮಾನ್ಯವಾಗಿ, ಅಂಥ ಸಾಕ್ಷ್ಯಗಳ ಸಾಕ್ಷಿಯನ್ನು ವಸ್ತುನಿಷ್ಠವಾಗಿ ಪರಿಶೀಲಿಸಬೇಕಾದ ಅವಶ್ಯಕತೆಯಿದ್ದು ಇದರಿಂದಾಗಿ, ಎಲ್ಲಾ ಎಚ್ಚರಿಕೆ ಹಾಗೂ ಜಾಗರೂಕತೆಗಳಿಂದ ಇದನ್ನು

*ಕ್ರಿಮಿನಲ್ ಅಪೀಲು ಸಂ: 1224/2011, ಇದರೊಂದಿಗೆ ಇತರೆ, ದಿನಾಂಕ: 12ನೇ ಆಗಸ್ಟ್, 2015.

ನೋಡಬೇಕಾಗಿರುತ್ತದೆ. ಪ್ರಾ.ಸಾ. 3 ಮತ್ತು 5 ರವರುಗಳು ಸ್ವತಂತ್ರವಾದ ಪ್ರತ್ಯಕ್ಷ ಸಾಕ್ಷೀದಾರರಾಗಿರುತ್ತಾರೆ. ಅವರು ಅಪರಾಧದ ಘಟನೆ ನಡೆದ ಸ್ಥಳದ ಬಳಿಯಲ್ಲಿ ತಮ್ಮ ವ್ಯಾಪಾರ ಸಂಸ್ಥೆಗಳನ್ನು ಹೊಂದಿದವರಾಗಿರುತ್ತಾರೆ. ಅವರುಗಳು ಮೃತ ವ್ಯಕ್ತಿಯ ಸಮುದಾಯದವರಾಗಲೀ ಅಥವಾ ಆಪಾದಿತ ವ್ಯಕ್ತಿಗಳ ಸಮುದಾಯದವರಾಗಲೀ ಆಗಿರುವುದಿಲ್ಲ. ಅವರು ಪ್ರಾಸಿಕ್ಯೂಷನ್ ಪ್ರಕರಣದಲ್ಲಿ ತಾವು ಹಿತಾಸಕ್ತಿ ಹೊಂದಿದವರೆಂದು ತೋರಿಸಲು ಪ್ರತಿವಾದಿಗಳ ಮೂಲಕ ಯಾವುದೇ ಸಲಹೆಯನ್ನು ನೀಡಿರುವುದಿಲ್ಲ. ಘಟನೆ ನಡೆದ ಸ್ಥಳದ ಬಳಿಯಲ್ಲಿಯೇ ಅವರುಗಳ ಅಂಗಡಿ ಮತ್ತು ರೆಸ್ಟೋರೆಂಟ್ ಇದ್ದ ಕಾರಣ ಅವರ ಹಾಜರಿಯ ಬಗ್ಗೆ ಯಾವುದೇ ಸಂಶಯ ಬರಲು ಸಾಧ್ಯವಾಗಿರುವುದಿಲ್ಲ. ಈ ಸಾಕ್ಷಿಗಳ ಸಾಕ್ಷ್ಯದಲ್ಲಿ ಕೆಲವು ವ್ಯತ್ಯಾಸಗಳಿರುತ್ತವೆ. ಆದರೆ, ಅಂಥ ವ್ಯತ್ಯಾಸಗಳು, ದಾಖಲೆಯಲ್ಲಿ ಇರುವ ಸಾಕ್ಷ್ಯವನ್ನು ದಕ್ಕೆಗೊಳಿಸುವುದಿಲ್ಲ.

(ಬಿ) ಪ್ರಾ.ಸಾ. 3 ಮತ್ತು 5 ರ ಸಾಕ್ಷ್ಯವು ಸುಸಂಗತವಾದ, ತರ್ಕಬದ್ಧವಾದ ಹಾಗೂ ವಿಶ್ವಾಸನೀಯವಾದವುಗಳು ಆಗಿರುತ್ತವೆ. ಅವರ ಸಾಕ್ಷ್ಯವನ್ನು ತ್ಯಜಿಸಿಬಿಡುವ ಮಟ್ಟಿಗೆ ಪಾಟೀ ಸವಾಲಿನಲ್ಲಿ ಪ್ರತಿವಾದಿ ವಕೀಲರು ಏನನ್ನು ಹೊರಹೊಮ್ಮಿಸಲಾಗಿರುವುದಿಲ್ಲ. ಪ್ರಾ.ಸಾ. 3 ಮತ್ತು 5 ರ ಸಾಕ್ಷ್ಯವನ್ನು ನಿರ್ಲಕ್ಷಿಸಿದ್ದಾಗ್ಯೂ ಪ್ರಾಸಿಕ್ಯೂಷನ್, ಪ್ರಾ.ಸಾ.1ರ ಸಾಕ್ಷ್ಯದ ಮೂಲಕ ತನ್ನ ವಾದವನ್ನು ರುಜುವಾತುಪಡಿಸಿರುತ್ತದೆ. ಪ್ರಾ.ಸಾ. 3 ಮತ್ತು 5 ರ ಸಾಕ್ಷ್ಯವನ್ನು ಉಪೇಕ್ಷಿಸಿದ್ದಾಗ್ಯೂ, ಪ್ರಾ.ಸಾ. 1ರ ಸಾಕ್ಷ್ಯವನ್ನು ಘಟನೆಯ ಏಕೈಕ ಪ್ರತ್ಯಕ್ಷ ಸಾಕ್ಷಿ ಎಂದು ಪರಿಗಣಿಸಿ, ಅಧಿವಿಚಾರಣಾ ನ್ಯಾಯಾಲಯವು ಸರಿಯಾದ ತೀರ್ಮಾನವನ್ನೇ ತೆಗೆದುಕೊಂಡಿದೆ. ಏಕೈಕ ಸಾಕ್ಷಿಯ ಸಾಕ್ಷ್ಯವನ್ನು ಒಪ್ಪತಕ್ಕದ್ದಲ್ಲವೆಂದು ಹಾಗೂ ಅದು ನಂಬಲರ್ಹವಾಗಿದ್ದಾಗ್ಯೂ ಅಂಥ ಸಾಕ್ಷ್ಯದ ಮೇಲೆ ಅಪರಾಧ ನಿರ್ಣಯವು ಅವಲಂಬಿಸಬಾರದೆಂದು ಯಾವ ನಿಯಮ ಅಥವಾ ಕಾನೂನು ಇರುವುದಿಲ್ಲವೆಂಬುದು ಸ್ಪಷ್ಟವಾಗಿರುತ್ತದೆ. ಏಕೈಕ ಸಾಕ್ಷಿಯ ಸಾಕ್ಷ್ಯವು ನೇರವಾಗಿ, ಪೂರಕವಾಗಿ, ನಂಬಲರ್ಹವಾಗಿದ್ದಲ್ಲಿ, ಪ್ರಾಸಿಕ್ಯೂಷನ್‌ನ ಪ್ರಕರಣದ ವಾದವನ್ನು ರುಜುವಾತುಪಡಿಸಲು ಸಾಕಷ್ಟಾಗಿರುತ್ತದೆ. ಅಪರಾಧ ನಿರ್ಣಯವು ಅಂಥ ಏಕೈಕ ಸಾಕ್ಷಿಯ ಸಾಕ್ಷ್ಯದ ಮೇಲೆ ಅವಲಂಬಿಸಿರುತ್ತದೆ. ವಿಧಿವತ್ತಾಗಿ ರುಜುವಾತುಪಡಿಸದ ಹೊರತು ಏಕೈಕ ಸಾಕ್ಷಿಯ ಸಾಕ್ಷ್ಯದ ಮೇಲೆ ಅಪರಾಧ ನಿರ್ಣಯವನ್ನು ಮಾಡಬಾರದೆಂಬ ಯಾವುದೇ ಶಾಸನಾತ್ಮಕ ಅಗತ್ಯತೆ ಇರುವುದಿಲ್ಲ. ನ್ಯಾಯಾಲಯವು ವಿಧಿವತ್ತಾಗಿ ರುಜುವಾತುಪಡಿಸುವಂಥ ಏಕೈಕ ಸಾಕ್ಷಿಯ ಸಾಕ್ಷ್ಯವನ್ನು ಒಪ್ಪಿಕೊಳ್ಳಬಹುದು ಮತ್ತು ಏಕೈಕ ಸಾಕ್ಷಿಯ ಸಾಕ್ಷ್ಯದ ಸ್ವರೂಪವು ಅಸ್ಪಷ್ಟವಾಗಿರುವ ಪ್ರಕರಣಗಳನ್ನು ಹೊರತುಪಡಿಸಿ ಆಪಾದಿತರ

ಅಪರಾಧವನ್ನು ನಿರ್ಣಯಿಸಬಹುದು. ಪ್ರಾ.ಸಾ ೩ ಮತ್ತು ೫ರ ಸಾಕ್ಷ್ಯವನ್ನು ಉಪೇಕ್ಷಿಸಿದ್ದಾಗ್ಯೂ, ಪ್ರಾ.ಸಾ. 1ರ ಸಾಕ್ಷ್ಯವನ್ನು ಘಟನೆಯ ಏಕೈಕ ಪ್ರತ್ಯಕ್ಷ ಸಾಕ್ಷಿ ಎಂದು ಪರಿಗಣಿಸಿ, ಅಧಿವಿಚಾರಣಾ ನ್ಯಾಯಾಲಯವು ಸರಿಯಾದ ತೀರ್ಮಾನವನ್ನೇ ತೆಗೆದುಕೊಂಡಿದೆ. ಏಕೈಕ ಸಾಕ್ಷಿಯ ಸಾಕ್ಷ್ಯವನ್ನು ಒಪ್ಪತಕ್ಕದ್ದಲ್ಲವೆಂದು ಹಾಗೂ ಅದು ನಂಬಲರ್ಹವಾಗಿದ್ದಾಗ್ಯೂ ಅಂಥ ಸಾಕ್ಷ್ಯದ ಮೇಲೆ ಅಪರಾಧ ನಿರ್ಣಯವು ಅವಲಂಬಿಸಬಾರದೆಂದು ಯಾವ ನಿಯಮ ಅಥವಾ ಕಾನೂನು ಇರುವುದಿಲ್ಲವೆಂಬುದು ಸ್ಪಷ್ಟವಾಗಿರುತ್ತದೆ. ಏಕೈಕ ಸಾಕ್ಷಿಯ ಸಾಕ್ಷ್ಯವು ನೇರವಾಗಿ, ಪೂರಕವಾಗಿ, ನಂಬಲರ್ಹವಾಗಿದ್ದಲ್ಲಿ, ಪ್ರಾಸಿಕ್ಯೂಷನ್‌ನ ಪ್ರಕರಣದ ವಾದವನ್ನು ರುಜುವಾತುಪಡಿಸಲು ಸಾಕಷ್ಟಾಗಿರುತ್ತದೆ. ಅಪರಾಧ ನಿರ್ಣಯವು ಅಂಥ ಏಕೈಕ ಸಾಕ್ಷಿಯ ಸಾಕ್ಷ್ಯದ ಮೇಲೆ ಅವಲಂಬಿಸಿರುತ್ತದೆ. ವಿಧಿವತ್ತಾಗಿ ರುಜುವಾತುಪಡಿಸದ ಹೊರತು ಏಕೈಕ ಸಾಕ್ಷಿಯ ಸಾಕ್ಷ್ಯದ ಮೇಲೆ ಅಪರಾಧ ನಿರ್ಣಯವನ್ನು ಮಾಡಬಾರದೆಂಬ ಯಾವುದೇ ಶಾಸನಾತ್ಮಕ ಅಗತ್ಯತೆ ಇರುವುದಿಲ್ಲ. ನ್ಯಾಯಾಲಯವು ವಿಧಿವತ್ತಾಗಿ ರುಜುವಾತುಪಡಿಸುವಂಥ ಏಕೈಕ ಸಾಕ್ಷಿಕ ಸಾಕ್ಷ್ಯವನ್ನು ಒಪ್ಪಿಕೊಳ್ಳಬಹುದು ಮತ್ತು ಏಕೈಕ ಸಾಕ್ಷಿಯ ಸಾಕ್ಷ್ಯದ ಸ್ವರೂಪವು ಅಸ್ಪಷ್ಟವಾಗಿರುವ ಪ್ರಕರಣಗಳನ್ನು ಹೊರತುಪಡಿಸಿ ಆಪಾದಿತರ ಅಪರಾಧವನನ್ನು ನಿರ್ಣಯಿಸಬಹುದು. ಪ್ರಾ.ಸಾ. 1 ಸಾಕ್ಷ್ಯವು ವೈದ್ಯಕೀಯ ಸಾಕ್ಷ್ಯದ ಹಾಗೂ ಅಪರಾಧ ನಡೆದುದಕ್ಕೆ ಸಂಬಂಧಿಸಿದ ಉದ್ದೇಶಕ್ಕೆ ಸಂಬಂಧಿಸಿದ ಸಾಕ್ಷ್ಯದ ಮೂಲಕ ವಿಧಿವತ್ತಾಗಿ ರುಜುವಾತು ಪಡಿಸುತ್ತದೆ ಎಂಬುದನ್ನು ಎತ್ತಿಹಿಡಿದಿರುವ ಉಚ್ಚ ನ್ಯಾಯಾಲಯವು ಅಧಿವಿಚಾರಣಾ ನ್ಯಾಯಾಲಯದ ನಿರ್ಣಯವನ್ನು ಎತ್ತಿಹಿಡಿದಿದೆ. ಕ್ರಿಮಿನಲ್ ಅಪೀಲುಗಳು ವಜಾಗೊಂಡಿವೆ.

***ಉಲ್ಲೇಖಿಸಲಾದ ಮೊಕದ್ದಮೆಗಳು*** ***ಪ್ಯಾರಾಗಳಲ್ಲಿ***

*1. 2007 (15) ಎಸ್‌ಸಿಸಿ 485*
*ಪ್ರೇಮ್ ನರೇನ್ ಮತ್ತು ಮತ್ತೊಬ್ಬರು -ವಿರುದ್ಧ-*
*ಮಧ್ಯ ಪ್ರದೇಶ ರಾಜ್ಯ* *(ಉಲ್ಲೇ) 11*

*2. (2000) 1 ಎಸ್‌ಸಿಸಿ 243*
*ರಮೇಶ್ ಬಿನ್ ಲಕ್ಷ್ಮಣ್ ಗೌಲಿ -ವಿರುದ್ಧ-*
*ಮಧ್ಯ ಪ್ರದೇಶ ರಾಜ್ಯ ಮತ್ತು ಇತರರು* *(ಉಲ್ಲೇ) 11*

ಅರ್ಜಿದಾರರ ಪರ ಮಾನ್ಯ ವಕೀಲರು: ಶ್ರೀ ಎಂ. ಸದಾಶಿವ
ಶ್ರೀ ಎಂ. ಶಶಿಧರ, ಶ್ರೀ ಜಗದೀಶ್ ಬಿ.ಎನ್.,
ಶ್ರೀ ಎಂ. ಶರಸ್‌ಚಂದ್ರ
ಪ್ರತ್ಯರ್ಜಿದಾರರ ಪರ ಮಾನ್ಯ ವಕೀಲರು: ಶ್ರೀ ಪಿ.ಎಂ. ನವಾಜ್

**ತೀರ್ಪು**

**ನ್ಯಾಯಮೂರ್ತಿ ಶ್ರೀ ಮೋಹನ್ ಎಂ. ಶಾಂತನಗೌಡರ್:**

ಎಸ್.ಸಿ. ಸಂ. 108/2009 ರಲ್ಲಿ ತ್ವರಿತ ಗತಿಯ ನ್ಯಾಯಾಲಯ, ಭದ್ರಾವತಿ ಇದು 30.09.2011 ರಂದು ಹೊರಡಿಸಿದ ಅಪರಾಧ ನಿರ್ಣಯದ ತೀರ್ಪು ಮತ್ತು ಆದೇಶವನ್ನು ಈ ಎರಡೂ ಅಪೀಲುಗಳಲ್ಲಿ ಪ್ರಶ್ನಿಸಲಾಗಿರುತ್ತದೆ. ಆಪಾದಿತ ಅಪೀಲುದಾರನನ್ನು ಅಧಿವಿಚಾರಿಸಿ, ಅಧೀನ ನ್ಯಾಯಾಲಯವು ಭಾರತೀಯ ದಂಡ ಸಂಹಿತೆಯ 149ನೇ ಪ್ರಕರಣದೊಂದಿಗೆ ಓದಿದ 143, 148, 302ನೇ ಪ್ರಕರಣಗಳಡಿಯಲ್ಲಿನ ದಂಡನೀಯ ಅಪರಾಧಗಳಿಗೆ ಸಂಬಂಧಿಸಿದಂತೆ ಅಪರಾಧ ನಿರ್ಣಯಿಸಲಾಗಿರುತ್ತದೆ.

ಕ್ರಿಮಿನಲ್ ಅಪೀಲು ಸಂ: 1224/2011ನ್ನು ಸಂ. 3 ರಿಂದ 6ರ ವರೆಗಿನ ಆಪಾದಿತರು ಹಾಗೆಯೇ, ಕ್ರಿಮಿನಲ್ ಅಪೀಲು ಸಂ: 1183/2011ನ್ನು, ಸಂ.1 ಮತ್ತು 2ನೇ ಆಪಾದಿತರು ಸಲ್ಲಿಸಿರುತ್ತಾರೆ.

2. ಆಪಾದಿತರು ಒಂದು ನಿರ್ದಿಷ್ಟ ಜಾತಿಗೆ ಸೇರಿದವರಾಗಿದ್ದು, ಅಂತೆಯೇ ಮೃತ ವ್ಯಕ್ತಿಯು ಬೇರೆ ಜಾತಿಗೆ ಸೇರಿದವನಾಗಿರುತ್ತಾನೆ. 10 ವರ್ಷಗಳಿಗಿಂತ ದೀರ್ಘ ಕಾಲದಿಂದಲೂ ಮೃತನಾದ ವ್ಯಕ್ತಿಯ ಜಾತಿಗೆ ಸೇರಿದ ಮಹಿಳೆಯರು/ ಹೆಣ್ಣು ಮಕ್ಕಳನ್ನು ಆಪಾದಿತರ ಜಾತಿಗೆ ಸೇರಿದ ವಯಸ್ಕರು ಚುಡಾಯಿಸಿಕೊಂಡೇ ಬಂದಿರುತ್ತಾರೆಂಬುದು ಪ್ರಕರಣದ ಸಂಕ್ಷಿಪ್ತ ವಿವರಣೆಯಾಗಿರುತ್ತದೆ. ಆ ಸಂಬಂಧದಲ್ಲಿ ಮೃತ ವ್ಯಕ್ತಿ ಮತ್ತು ಇತರರು, ಆಪಾದಿತ ವ್ಯಕ್ತಿಗಳ ಜಾತಿಯ ಸದಸ್ಯರಲ್ಲಿ ತಮ್ಮ ಹೆಣ್ಣುಮಕ್ಕಳ ತಂಟೆಗೆ ಬರದಂತೆ ಕೋರಿಕೊಂಡಿರುತ್ತಾರೆ, ಮಾತ್ರವಲ್ಲದೆ, ಅವರ

ವಿರುದ್ಧ ದೂರನ್ನೂ ಸಹ ದಾಖಲಿಸಿರುತ್ತಾರೆ; ಅವರು ಪರಸ್ಪರ ಜಗಳಗಳನ್ನು ಸಹ ಮಾಡಿರುತ್ತಾರೆ. ಮೃತ ವ್ಯಕ್ತಿ ಮತ್ತು ಆತನ ಜಾತಿವಂದಿಗರು ಎಷ್ಟೇ ಪ್ರಯತ್ನಿಸಿದರೂ ಆಪಾದಿತರ ಜಾತಿಯ ಜನರು ತಮ್ಮ ವರ್ತನೆಯನ್ನು ನಿಲ್ಲಿಸಿರುವುದಿಲ್ಲ. ಮುಂದುವರೆದು, ಆಪಾದಿತರು ನಿರ್ದಿಷ್ಟ ಜಾತಿಯ ಕಿರಿಯ ವಯೋಮಾನದವರಾಗಿದ್ದು, ಇವರುಗಳು ತಮ್ಮ ಜಾತಿಯ ಹಿರಿಯರ ಮಾತಿನ ಪ್ರಭಾವದಿಂದ, ಗುಂಪಾಗಿ ಬಂದು ಮಾರಕಾಸ್ತ್ರಗಳಿಂದ ಮೃತ ವ್ಯಕ್ತಿಯನ್ನು ಹೊಡೆದಿರುತ್ತಾರೆಂಬುದೂ ಪ್ರಾಸಿಕ್ಯೂಷನ್‌ನ ವಾದವಾಗಿರುತ್ತದೆ. ಘಟನೆ ನಡೆದ ದಿನದಂದು, ಆಪಾದಿತರು, ಪ್ರಸ್ತುತ ಮೃತನಾಗಿರುವ ವ್ಯಕ್ತಿಯೇ ತಮ್ಮೆಲ್ಲಾ ಕಾನೂನುಬಾಹಿರ ಚಟುವಟಿಕೆಗಳನ್ನು ಆಕ್ಷೇಪಿಸಿರುವಂಥ ಮುಖ್ಯ ವ್ಯಕ್ತಿಯಾಗಿರುವುದರಿಂದ ಆತನನ್ನು ಮುಗಿಸಿಬಿಡಬೇಕೆಂದು ತೀರ್ಮಾನಿಸಿರುತ್ತಾರೆ. ಹಾಗಾಗಿ, ಎಲ್ಲಾ ಆಪಾದಿತರು ಆತನನ್ನು ಮುಗಿಸಿಬಿಡುವ ಒಂದೇ ಉದ್ದೇಶದಿಂದ ಎರಡು ಮೋಟಾರು ಸೈಕಲ್ಲುಗಳಲ್ಲಿ, ನಾಲ್ಕು ಮಚ್ಚುಗಳು ಮತ್ತು ಒಂದು ಕಬ್ಬಿಣದ ಸರಳುಗಳೊಂದಿಗೆ ಬಂದಿರುತ್ತಾರೆ. ಆ ವೇಳೆಗೆ ಮೃತ ವ್ಯಕ್ತಿಯು ತನ್ನ ಮೋಟಾರು ಸೈಕಲನ್ನು ದುರಸ್ತಿಗೆ ಬಿಡಲು ಗ್ಯಾರೇಜಿಗೆ ಬರುತ್ತಿರುತ್ತಾನೆ. ಎಲ್ಲಾ ಆಪಾದಿತರು, 11.03.2009 ರಂದು ಬೆಳಿಗ್ಗೆ 10.00 ಗಂಟೆಗೆ ತಾವು ತಂದಿದ್ದ ಆಯುಧಗಳೊಂದಿಗೆ ಮೃತ ವ್ಯಕ್ತಿಯನ್ನು ಹೊಡೆಯುತ್ತಾರೆ; ಅಂಥ ಹೊಡೆತದಿಂದಾಗಿ, ಮೃತ ವ್ಯಕ್ತಿಯು ಸ್ಥಳದಲ್ಲೇ ಮರಣಹೊಂದಿರುತ್ತಾನೆ.

ಆ ಸಮಯದಲ್ಲಿ, ಮೃತ ವ್ಯಕ್ತಿಯು, ಆ ದಿನ ಆತನ ಮಗಳು ಶಶಿಕಲಾ (ಪಿ.ಡಬ್ಲ್ಯೂ.1) ಳನ್ನು ಕಾಲೇಜಿಗೆ ಹೋಗಲು ವಿಳಂಬವಾಗಿದ್ದ ಕಾರಣ, ತಾನೇ ಆಕೆಯನ್ನು ಕಾಲೇಜಿಗೆ ಬಿಡಲು ಬಂದಿರುತ್ತಾನೆ; ದುರಾದೃಷ್ಟವಶಾತ್, ಅಂದು ಮೆಕ್ಯಾನಿಕಲ್ ತೊಂದರೆಗಳಿಂದಾಗಿ ಮೋಟಾರು ಸೈಕಲ್ ಮಾರ್ಗಮಧ್ಯೆ ನಿಂತುಹೋಗಿರುತ್ತದೆ. ತದನುಸಾರವಾಗಿ, ಮೋಟಾರು ಸೈಕಲನ್ನು ದುರಸ್ತಿ ಮಾಡಿಸಲು ಅದನ್ನು ತಳ್ಳುತ್ತಾ ನಡೆಯಲು ಆರಂಭಿಸಿದಾಗ, ಪಿ.ಡಬ್ಲ್ಯೂ. 1 ಮೋಟಾರು ಸೈಕಲ್ಲಿನಿಂದ ಇಳಿದು, ಮೃತನ ಹಿಂದೆ ನಡೆದು ಹೋಗುತ್ತಿರುತ್ತಾಳೆ. ಅದೇ ಸಮಯದಲ್ಲಿ ಅಂದರೆ ಮೃತ ವ್ಯಕ್ತಿ ಮೋಟಾರು ಸೈಕಲ್ಲನ್ನು ತಳ್ಳುತ್ತಾ ಸುಮಾರು 20 ಹೆಜ್ಜೆ ಇಟ್ಟಿರುವಷ್ಟರಲ್ಲಿ ಎಲ್ಲಾ ಆಪಾದಿತರು ಎರಡು ಮೋಟಾರು ಸೈಕಲ್ಲುಗಳಲ್ಲಿ ಬಂದು ಮೃತ ವ್ಯಕ್ತಿಯನ್ನು ಹೊಡೆದಿರುತ್ತಾರೆ. ಶಶಿಕಲಾ (ಪಿ.ಡಬ್ಲ್ಯೂ.1), ಈಕೆಗೆ

19–20 ವರ್ಷಗಳಾಗಿದ್ದು ಆ ಕಾಲಾವಧಿಯಲ್ಲಿ 1ನೇ ವರ್ಷದ ಬಿಬಿಎಂ ಕೋರ್ಸ್‌ನಲ್ಲಿ ಓದುತ್ತಿರುತ್ತಾಳೆ. ಭದ್ರಾವತಿಯ ಹಳೆಯ ಪಟ್ಟಣ ಪೊಲೀಸ್ ಠಾಣೆಯಲ್ಲಿ 11.03.2009 ರಂದು ಸುಮಾರು ಬೆಳಿಗ್ಗೆ 11.00 ಗಂಟೆಗೆ ದೂರನ್ನು ದಾಖಲಿಸಿದ್ದು, ಇದನ್ನು ಅಪರಾಧ ಸಂ. 98/2009 ಎಂದು, ಸದರಿ ಪೊಲೀಸ್ ಠಾಣೆಯ ಪೊಲೀಸ್ ಸಬ್–ಇನ್ಸ್‌ಪೆಕ್ಟರ್‌ರವರು ನೋಂದಾಯಿಸಿರುತ್ತಾರೆ. ಆ ತರುವಾಯ ಕೂಡಲೇ ಪ್ರಥಮ ಮಾಹಿತಿ ವರದಿಯನ್ನು ಅಧಿಕಾರ ವ್ಯಾಪ್ತಿಯ ಮ್ಯಾಜಿಸ್ಟ್ರೇಟರಿಗೆ ರವಾನಿಸಿರುತ್ತಾರೆ. ಆದಾಗ್ಯೂ, ಸದರಿ ವರದಿಯು 11.03.2009 ರಂದು ಮಧ್ಯಾಹ್ನ 3.00 ಗಂಟೆಗೆ ಅಧಿಕಾರ ವ್ಯಾಪ್ತಿಯ ಮ್ಯಾಜಿಸ್ಟ್ರೇಟರಿಗೆ ತಲುಪಿರುತ್ತದೆ. ಪಿ.ಡಬ್ಲ್ಯು. 23–ಪೊಲೀಸ್ ಸಬ್ ಇನ್ಸ್‌ಪೆಕ್ಟರ್‌ರವರು ತನಿಖೆಯನ್ನು ಪೂರ್ಣಗೊಳಿಸಿ, ಆರೋಪ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

3. ತನ್ನ ವಾದವನ್ನು ರುಜುವಾತುಪಡಿಸಿಕೊಳ್ಳಲು, ಪ್ರಾಸಿಕ್ಯೂಷನ್ ಎಲ್ಲಾ 23 ಸಾಕ್ಷಿಗಳನ್ನು ಪರೀಕ್ಷಿಸಿ, 19ನ್ನು ನಿಶಾನೆಗಳೆಂದು ಹಾಗೂ 25ನ್ನು ಮುದ್ದೆ ಮಾಲುಗಳೆಂದು ಗುರುತು ಮಾಡಿರುತ್ತಾರೆ. ಪ್ರತಿವಾದಿಗಳ ಪರವಾಗಿ ಯಾವುದೇ ಸಾಕ್ಷಿಯನ್ನು ಪರೀಕ್ಷಿಸಿರುವುದಿಲ್ಲ. ಮೇಲೆ ಹೇಳಿದಂತೆ, ಅಧಿವಿಚಾರಣಾ ನ್ಯಾಯಾಲಯವು, ದಾಖಲೆಯಲ್ಲಿನ ಸಾಕ್ಷ್ಯವನ್ನು ಮೌಲ್ಯಮಾಪನ ಮಾಡಿದ ಮೇಲೆ, ಎಲ್ಲಾ ಅಪರಾಧಿಗಳನ್ನು ಅವರ ಮೇಲಿರುವ ಆರೋಪಗಳೊಂದಿಗೆ ಅವರ ಅಪರಾಧಗಳ ಸಂಬಂಧದಲ್ಲಿ ಅಪರಾಧ ನಿರ್ಣಯಿಸಲಾಗುತ್ತದೆ.

4. ಅಪೀಲುದಾರರು–ಆಪಾದಿತರ ಪರ ಹಾಜರಾದ ಮಾನ್ಯ ನ್ಯಾಯವಾದಿಗಳಾದ ಶ್ರೀ ಎಂ. ಶರಸ್ ಚಂದ್ರ, ಶ್ರೀ ಎಂ. ಶಶಿಧರ ಮತ್ತು ಶ್ರೀ ಜಗದೀಶ ಬಿ.ಎನ್. ಅವರು ದಾಖಲೆ ಮೇಲಿನ ಇಡೀ ಸಾಕ್ಷ್ಯದ ಮೂಲಕ ನಮ್ಮ ಗಮನ ಸೆಳೆದು, ನ್ಯಾಯಾಧಿಕರಣವು ಹೊರಿಸಿರುವ ಕಾರಣಗಳು ಮತ್ತು ತಳೆದಿರುವ ತೀರ್ಮಾನವು ಸರಿಯಾದುದಾಗಿರುವುದಿಲ್ಲ; ಪ್ರಾ.ಸಾ 1, 3 ಮತ್ತು 5ನೇ ಸಾಕ್ಷ್ಯಗಳು ಸರಿಯಾದವುಗಳಾಗಿಲ್ಲದಿರುವುದರಿಂದ ಅವುಗಳನ್ನು ಅಧಿವಿಚಾರಣಾ ನ್ಯಾಯಾಲಯವು ನಂಬಬಾರದಾಗಿರುತ್ತದೆ; ಪ್ರಾ.ಸಾ. 1, ಯಾವಾಗಲೂ ತನ್ನ ಸೈಕಲ್ ಅಥವಾ ಬಸ್‌ನಲ್ಲಿ ಕಾಲೇಜಿಗೆ ಹೋಗುತ್ತಿದ್ದ ಕಾರಣ ಘಟನೆ ನಡೆದಾಗ ಆಕೆ

ಸ್ಥಳದಲ್ಲಿರಲಿಲ್ಲವೆಂದು, ಘಟನೆ ನಡೆದ ದಿನಾಂಕದಿಂದ ಸುಮಾರು 40 ದಿನಗಳ ತರುವಾಯ ತನಿಖೆಯ ಸಂದರ್ಭದಲ್ಲಿ ಪೊಲೀಸರು ಪ್ರಾ. ಸಾ. 3 ಮತ್ತು 5 ರವರ ಹೇಳಿಕೆಗಳನ್ನು ದಾಖಲಿಸಿಕೊಂಡಿರುತ್ತಾರೆ. ಆದಾಗ್ಯೂ, ಪ್ರಾಸಿಕ್ಯೂಷನ್, ಆ ದಿನ ಪ್ರಾ.ಸಾ. 1 ತನ್ನ ತಂದೆಯೊಡನೆ ಮೋಟಾರು ಸೈಕಲ್ಲಿನ ಮೇಲೆ ಕಾಲೇಜಿಗೆ ಹೋಗುತ್ತಿದ್ದಳೆಂದೂ, ಆಕೆಯೇ ಪ್ರತ್ಯಕ್ಷ ಸಾಕ್ಷಿಯೆಂದು ಖಚಿತವಾಗಿ ನಿರೂಪಿಸಿರುತ್ತದೆ. ತನಿಖಾಧಿಕಾರಿಯ ಸಾಕ್ಷ್ಯವು, ಪ್ರಾ.ಸಾ.1 ರ ಕಾಲೇಜು ಬೆಳಿಗ್ಗೆ 8.00 ಗಂಟೆಯಿಂದ ಮಧ್ಯಾಹ್ನ 1.30ರ ವರೆಗೆ ಎಂಬುದನ್ನು ಬಹಿರಂಗಪಡಿಸಿರುತ್ತದೆ. ಆದ್ದರಿಂದ, ಆಕೆ ಅಂದು ಬೆಳಿಗ್ಗೆ 10.00 ಅಂದರೆ ಆಪಾದಿತ ಅಪರಾಧ ನಡೆದ ಸಮಯದಲ್ಲಿ ಸ್ಥಳದಲ್ಲಿ ಇರಲು ಸಾಧ್ಯವಿರುವುದಿಲ್ಲ ಎಂದು ವಾದಿಸಿರುತ್ತಾರೆ. ಮುಂದುವರೆದು, ಪೊಲೀಸರು ಅಪರಾಧದ ನೋಂದಣಿ ಯಾಗುವುದಕ್ಕೆ ಮೊದಲೇ ವಿಷಯವನ್ನು ತನಿಖೆ ಮಾಡಲು ಕ್ರಮ ಕೈಗೊಂಡಿರುತ್ತಾರೆಂದೂ, ಘಟನೆ ಕುರಿತಂತೆ ಪೊಲೀಸರಿಗೆ ಪೂರ್ವ ಮಾಹಿತಿಯಿತ್ತೆಂದೂ; ಆಪಾದಿತರನ್ನು ದಸ್ತಗಿರಿ ಮಾಡಿರುವುದರಿಂದ ಮತ್ತು ಅಪರಾಧ ನೋಂದಣಿಯನ್ನು ಮಾಡುವ ಮೊದಲೇ ಕೆಲವು ಮುಖ್ಯವಾದ ವಸ್ತುಗಳನ್ನು ಅಭಿಗ್ರಹಿಸಿರುವುದರಿಂದ, ನಿಶಾನೆ ಪಿ.1 ರ ಮೇರೆಗಿನ ಮೊದಲ ಮಾಹಿತಿಯು, ಕ್ರಿಮಿನಲ್ ಪ್ರಕ್ರಿಯಾ ಸಂಹಿತೆಯ 162ನೇ ಪ್ರಕರಣದ ಮೂಲಕ ಮುಖಾಮುಖಿಯಾಗುವುದರಿಂದ ತನ್ನ ಪ್ರಾಮುಖ್ಯತೆಯನ್ನು ಕಳೆದುಕೊಳ್ಳುತ್ತದೆಂದು ವಾದಿಸಿರುತ್ತಾರೆ. ಮುಂದುವರೆದು, ಮಾನ್ಯ ನ್ಯಾಯವಾದಿಗಳು, ಪ್ರಾ.ಸಾ. 1 ಇಂಥ ಸಂದರ್ಭದಲ್ಲಿ ತನ್ನ ತಂದೆಯನ್ನು ರಕ್ಷಿಸಲು ಒಂದಿನಿತೂ ಪ್ರಯತ್ನಿಸದೆ, ಆತನ ಪ್ರಾಣ ಉಳಿಸಲು ಆತನನ್ನು ಆಸ್ಪತ್ರೆಗೆ ಸೇರಿಸಲು ಪ್ರಯತ್ನಿಸದೆ, ಮೌನವಾಗಿದ್ದು, ಅಲ್ಲಿ ಏನೂ ನಡೆದೇ ಇಲ್ಲವೇನೋ ಎಂಬಂತೆ ಮನೆಗೆ ಹೋಗಿರುವುದು ಅತ್ಯಂತ ಅಸ್ವಾಭಾವಿಕವಾದ ನಡತೆಯಾಗಿದೆಯೆಂದು ನಿವೇದಿಸಿಕೊಂಡಿರುತ್ತಾರೆ. ಈ ಎಲ್ಲಾ ಇತರೆ ಆಧಾರಗಳಿಂದ ಆಪಾದಿತರನ್ನು ಖುಲಾಸೆ ಮಾಡಬೇಕೆಂದು ಕೋರಿರುತ್ತಾರೆ. ಶ್ರೀ ಪಿ.ಎಂ. ನವಾಜ್ ಮಾನ್ಯ ಎಸ್.ಪಿ.ಪಿ. ರವರು ಅಧೀನ ನ್ಯಾಯಾಲಯದ ತೀರ್ಪಿನ ಸಂಬಂಧದಲ್ಲಿ ಪ್ರಾ.ಸಾ. 3 ಮತ್ತು 5ರ ಹೇಳಿಕೆಗಳನ್ನು ತಡವಾಗಿ ದಾಖಲಿಸಿಕೊಂಡಿರುತ್ತಾರೆಂಬ ಒಂದೇ ಕಾರಣದಿಂದ, ಅವರ ಹೇಳಿಕೆಯನ್ನು ಅವರು ಪಾಟೀ ಸವಾಲನ್ನು ಎದುರಿಸಿರುವುದರಿಂದ ಸಂದೇಹ ಪಡುವಂತಿಲ್ಲವೆಂದೂ; ತನಿಖಾಧಿಕಾರಿಯು ಕೆಲವು ಪ್ರತ್ಯಕ್ಷ ಸಾಕ್ಷಿಗಳ ಹೇಳಿಕೆಯನ್ನು ತಡವಾಗಿ

ದಾಖಲಿಸಿಕೊಳ್ಳಲಾಗಿದೆಯೆಂಬ ವಾಸ್ತವಾಂಶದಿಂದ ಪ್ರಾಸಿಕ್ಯೂಷನ್ ಪ್ರಕರಣವನ್ನು ಸಂದೇಹಿಸುವಂತಿಲ್ಲವೆಂದೂ ಅಥವಾ ಅಂಥ ಪ್ರತ್ಯಕ್ಷ ಸಾಕ್ಷಿಯ ಹೇಳಿಕೆಯನ್ನೂ ಸಹ ಸಂದೇಹಿಸುವಂತಿಲ್ಲವೆಂದೂ ವಾದಿಸಿರುತ್ತಾರೆ. ಇವರು ಮುಂದುವರೆದು, ಫಿರ್ಯಾದನ್ನು ಈ ಘಟನೆ ನಡೆದ ನಿಕಟ ತರುವಾಯ ಸಲ್ಲಿಸಲಾಗಿದೆಯೆಂದು; ಆಪಾದಿತರನ್ನು ಅಪರಾಧದ ನೋಂದಣಿಯ ತರುವಾಯ ಬಂಧಿಸಲಾಗಿದೆಯೆಂದೂ, ತರುವಾಯ, ತನಿಖೆಯನ್ನು ಆರಂಭಿಸಲಾಗಿದೆಯೆಂದೂ ನಿವೇದಿಸಿಕೊಂಡಿರುತ್ತಾರೆ. ಇವರ ಪ್ರಕಾರ, ಮೃತರ ಚಲನ–ವಲನವನ್ನು ಗಮನಿಸುತ್ತಾ ಆಪಾದಿತರು ಆ ಸ್ಥಳಕ್ಕೆ ಅವರೆಲ್ಲರೂ ಮಾರಣಾಂತಿಕ ಶಸ್ತ್ರಗಳೊಂದಿಗೆ ಬಂದಿರುವುದು ಪೂರ್ವನಿಯೋಜಿತವಾಗಿದ್ದು, ಬಲಿಯಾದ ವ್ಯಕ್ತಿಗೆ ಆಗಿರುವ 13ಕ್ಕಿಂತ ಹೆಚ್ಚಿನ ಮಾರಣಾಂತಿಕ ಪೆಟ್ಟುಗಳಿಗೆ ಎಲ್ಲಾ ಆಪಾದಿತರೂ ಕಾರಣರಾಗಿರುತ್ತಾರೆಂದು, ಎಫ್‌ಎಸ್‌ಎಲ್ ವರದಿ ಮತ್ತು ಸೆರಾಲಜಿ ವರದಿಗಳೆರಡೂ ತನಿಖೆಗೆ ಕಳುಹಿಸಿದ ಎಲ್ಲಾ ಮಾರಣಾಂತಿಕ ಶಸ್ತ್ರಗಳಲ್ಲೂ 'ಬಿ' ಗುಂಪಿನ ರಕ್ತದ ಚಹರೆಗಳನ್ನೇ ಹೊಂದಿರುತ್ತವೆಂಬುದನ್ನು ಬಹಿರಂಗಪಡಿಸಿರುತ್ತದೆಂದೂ ನಿವೇದಿಸಿಕೊಂಡಿರುತ್ತಾರೆ. ಹಾಗಾಗಿ, ಇವರ ಪ್ರಕಾರ ಅಧಿವಿಚಾರಣಾ ನ್ಯಾಯಾಲಯವು, ಆಪಾದಿತರ ಅಪರಾಧ ನಿರ್ಣಯಿಸಿರುವುದು ಸಮರ್ಥನೀಯವಾಗಿರುತ್ತದೆ.

5. ಪ್ರಾ.ಸಾ. 1 ಪ್ರಶ್ನಿತ ಘಟನೆಗೆ ಪ್ರತ್ಯಕ್ಷ ಸಾಕ್ಷಿಯಾಗಿರುತ್ತಾಳೆ. ಈಕೆ ಮೃತ ವ್ಯಕ್ತಿಯ ಮಗಳಾಗಿರುತ್ತಾಳೆ. ಈಕೆ ನಿಶಾನೆ ಪಿ.1 ರ ಮೇರೆಗೆ ದೂರನ್ನು ದಾಖಲಿಸಿರುತ್ತಾಳೆ. ಅಲ್ಲದೆ, ಈಕೆ, ವಶದಲ್ಲಿಟ್ಟುಕೊಂಡಿದ್ದಂಥ ಮೃತನ ಚಪ್ಪಲಿ, ಮಚ್ಚುಗಳು ಮುಂತಾದವುಗಳ ಮುರಿದ ಚೂರುಗಳು ಮುಂತಾದವುಗಳಡಿಯಲ್ಲಿ ಅಪರಾಧ (ನಿಶಾನೆ ಪಿ.2)ದ ದೃಶ್ಯವನ್ನು ಕುರಿತಂತೆ ಸಾಕ್ಷ್ಯವನ್ನು ನೀಡಿರುತ್ತಾಳೆ. ದೂರನ್ನು ಬೆಳಿಗ್ಗೆ 11 ಗಂಟೆಗೆ ನೀಡಿದ್ದು, ಇದರಿಂದಾಗಿ ಅಪರಾಧ ಸ್ಥಳದ ಪಂಚನಾಮವನ್ನು ಬೆಳಿಗ್ಗೆ 11.45 ರಿಂದ ಮಧ್ಯಾಹ್ನ 12 ಗಂಟೆ ಒಳಗೆ ನಡೆಸಲಾಗಿರುತ್ತದೆ.

ಪ್ರಾ.ಸಾ. 2. ವೈದ್ಯರಾಗಿರುತ್ತಾರೆ. ಇವರು ಶವದ ಶವ ಪರೀಕ್ಷೆ ಮಾಡಿರುತ್ತಾರೆ. ಶವ ಪರೀಕ್ಷೆಯ ವರದಿಯ ನಿಶಾನೆ ಪಿ.3ರ ಪ್ರಕಾರವೇ ಇದೆ.

ಪ್ರಾ.ಸಾ. 3 ಮತ್ತು 5 ಪ್ರಶ್ನಿತ ಘಟನೆಯ ಪ್ರತ್ಯಕ್ಷ ಸಾಕ್ಷಿಯಾಗಿರುತ್ತದೆ.

ಪ್ರಾ.ಸಾ. 4. ಆಪಾದಿತರ ಸಮುದಾಯದ ಸದಸ್ಯರು ಚುಡಾಯಿಸುತ್ತಿದ್ದ ವಿಷಯಕ್ಕೆ ಸಂಬಂಧಿಸಿದಂತೆ ಸಾಕ್ಷ್ಯ ನೀಡಿರುತ್ತಾರೆ. ಆದಾಗ್ಯೂ, ಈಕೆ ತನಿಖೆಯ ಸಮಯದಲ್ಲಿ ಹೇಳಿದಂಥ ಕೆಲವು ವಿಚಾರಗಳನ್ನು ನ್ಯಾಯಾಲಯದ ಎದುರು ಸಾಕ್ಷ್ಯ ನೀಡುವಾಗ ಹೇಳದಿರುವುದರಿಂದ, ಪ್ರಾಸಿಕ್ಯೂಷನ್ ಆಕೆಯನ್ನು ಪ್ರತಿಕೂಲ ಸಾಕ್ಷ್ಯವೆಂದು ಪರಿಗಣಿಸಿರುತ್ತದೆ.

ಪ್ರಾ.ಸಾ. 6, ಪ್ರಾ.ಸಾ 4 ರ ತಾಯಿಯಾಗಿರುತ್ತಾರೆ. ಈಕೆ ಸಹ ಅಪರಾಧ ಎಸಗಿರುವುದಕ್ಕೆ ಸಂಬಂಧಿಸಿದ ಉದ್ಧೇಶದ ಬಗ್ಗೆ ಸಾಕ್ಷ್ಯ ನೀಡಿರುತ್ತಾಳೆ. ಈಕೆ ತನ್ನ ಸಾಕ್ಷ್ಯದಲ್ಲಿ, ಆಪಾದಿತರು ಹಾಗೂ ಆಪಾದಿತ ವ್ಯಕ್ತಿಗಳ ಸಮುದಾಯದವರು ಮೃತ ವ್ಯಕ್ತಿಯ ಸಮುದಾಯಕ್ಕೆ ಸೇರಿದ ಮಹಿಳೆಯರು/ಹುಡುಗಿಯರನ್ನು ಯಾವಾಗಲೂ ಚುಡಾಯಿಸುತ್ತಿದ್ದು ಅವರಿಗೆ ಆ ಮೂಲಕ ಮಾನಸಿಕ ಹಿಂಸೆ ನೀಡುತ್ತಿದ್ದರೆಂಬುದನ್ನು ಸ್ಪಷ್ಟಪಡಿಸಿರುತ್ತಾಳೆ.

ಪ್ರಾ.ಸಾ. 7 ರಿಂದ 9 ಶವ ಪಂಚನಾಮೆ (ನಿಶಾನೆ ಪಿ.5)ಗೆ ಸಂಬಂಧಿಸಿದ ಪ್ರತ್ಯಕ್ಷ ಸಾಕ್ಷಿಗಳಾಗಿರುತ್ತಾರೆ. ಅವರಲ್ಲಿ ಪ್ರಾ.ಸಾ 8 ಪ್ರತಿಕೂಲ ಸಾಕ್ಷ್ಯವಾಗಿ ಪರಿಣಮಿಸಿರುತ್ತದೆ.

ಪ್ರಾ.ಸಾ. 10 ಅಪರಾಧ ಎಸಗಿರುವ ಉದ್ದೇಶ ಕುರಿತಂತೆ ಹಾಗೂ ಆಪಾದಿತರ ಕಾನೂನುಬಾಹಿರ ನಡತೆ ಕುರಿತಂತೆ ಸಾಕ್ಷ್ಯ ನೀಡಿರುತ್ತಾರೆ.

ಪ್ರಾ.ಸಾ. 11 ಮತ್ತು 12ರ ಸಾಕ್ಷ್ಯವು, ಪ್ರಾ.ಸಾ. 10ಕ್ಕೆ ಬಹುಮಟ್ಟಿಗೆ ಹೋಲುತ್ತದೆ.

ಪ್ರಾ.ಸಾ. 13 ಪ್ರಾಸಿಕ್ಯೂಷನ್ ಪ್ರಕರಣಕ್ಕೆ ಪ್ರತಿಕೂಲವಾಗಿ ಪರಿಣಮಿಸಿರುತ್ತದೆ. ಈತ ಅವರ ಉದ್ದೇಶದ ಬಗ್ಗೆ ಸಾಕ್ಷ್ಯ ನೀಡಿರುತ್ತಾನೆ. ಆದರೆ, ಈತ ಪ್ರಾಸಿಕ್ಯೂಷನ್‌ನ ಪ್ರಕರಣವನ್ನು ಬೆಂಬಲಿಸಿರುವುದಿಲ್ಲ.

ಪ್ರಾ.ಸಾ. 14 ಮತ್ತು 15 ರವರುಗಳು ತನಿಖೆಯಲ್ಲಿ ಪಾಲ್ಗೊಂಡಿದ್ದಂಥ ಪೊಲೀಸ್ ಕಾನ್‌ಸ್ಟೇಬಲ್‌ಗಳಾಗಿರುತ್ತಾರೆ. ಪ್ರಾ.ಸಾ. 14, 11.03.2009 ರಂದು ಆಪಾದಿತರ ದಸ್ತಗಿರಿಯ ಕುರಿತಂತೆ ಸಾಕ್ಷ್ಯ ನೀಡಿರುತ್ತಾರೆ. ಪ್ರಾ.ಸಾ. 15, ಮರಣೋತ್ತರ ಪರೀಕ್ಷೆಯ ತರುವಾಯ ಮೃತ ವ್ಯಕ್ತಿಯ ರಕ್ತದ ಕಲೆಗಳಿದ್ದ ಬಟ್ಟೆಗಳನ್ನು ಪಡೆದುಕೊಂಡು, ಅವುಗಳನ್ನು ಪೊಲೀಸ್ ಠಾಣೆಗೆ ತೆಗೆದುಕೊಂಡು ಹೋಗಿರುತ್ತಾರೆ.

ಪ್ರಾ.ಸಾ. 16, ಪೊಲೀಸ್ ಠಾಣೆಯಲ್ಲಿ ಆಪಾದಿತರಿಂದ ಸ್ವೀಕರಿಸಿದ 13 ರಿಂದ 16ರ ವರೆಗಿನ ಆಯುಧ ಎಂ.ಒ.ಎಸ್. ಅಡಿಯ ನಿಶಾನೆ ಪಿ. 10 ವಶಪಡಿಸಿಕೊಂಡ ಪಂಚನಾಮೆಗೆ ಸಂಬಂಧಿಸಿದ ಸಾಕ್ಷ್ಯವಾಗಿರುತ್ತದೆ. ಸದರಿ ಪಂಚನಾಮವನ್ನು ಬೆಳಿಗ್ಗೆ 11.10 ರಿಂದ ಬೆಳಿಗ್ಗೆ 11.45 ರ ವರೆಗೆ ನಡೆಸಲಾಗಿರುತ್ತದೆ.

ಅಪರಾಧ ಎಸಗಿರುವುದಕ್ಕೆ ಸಂಬಂಧಿಸಿದ ಉದ್ದೇಶದ ಬಗ್ಗೆ ಸಾಕ್ಷ್ಯ ನೀಡಬಹುದಾಗಿದ್ದಂಥ ಪ್ರಾ.ಸಾ. 17 ಪ್ರಕರಣವನ್ನು ಬೆಂಬಲಿಸಿರುವುದಿಲ್ಲ.

ಪ್ರಾ.ಸಾ. 18 ಮೃತ ವ್ಯಕ್ತಿಯ ಸಹೋದರನಾಗಿರುತ್ತಾನೆ. ಇವನು, ಆಪಾದಿತನ ಕಾನೂನುಬಾಹಿರ ನಡತೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ಮೃತ ವ್ಯಕ್ತಿ ಮತ್ತು ಆಪಾದಿತನ ನಡುವೆ ನಡೆದಂಥ ಹಿಂದಿನ ಜಗಳದ ಬಗ್ಗೆ ಸಾಕ್ಷ್ಯ ನೀಡಿರುತ್ತಾನೆ.

ಪ್ರಾ.ಸಾ. 19 ಭದ್ರಾವತಿ ಹಳೆಯ ಪಟ್ಟಣ ಪೊಲೀಸ್ ಠಾಣೆಯ ಸಬ್–ಇನ್ಸ್‌ಪೆಕ್ಟರ್ ಆಗಿದ್ದು, ಆತ ಪ್ರಥಮ ಮಾಹಿತಿ ವರದಿಯನ್ನು ನೋಂದಾಯಿಸಿಕೊಂಡು ತನಿಖೆಯ ಒಂದು ಭಾಗವನ್ನು ನಡೆಸಿರುತ್ತಾನೆ.

ಪ್ರಾ.ಸಾ. 20 ಸ್ಥಳ ಮತ್ತು ವಶಪಡಿಸಿಕೊಂಡ ಪಂಚನಾಮ ನಿಶಾನೆ ಪಿ.2 ಕ್ಕೆ ಸಂಬಂಧಿಸಿದ ಸಾಕ್ಷ್ಯವಾಗಿರುತ್ತಾನೆ. ಸದರಿ ಪಂಚನಾಮೆಯಡಿಯಲ್ಲಿ, ಕೇವಲ ವಶಪಡಿಸಿಕೊಂಡಿದ್ದ ಮಚ್ಚುಗಳು ಮುಂತಾದವುಗಳ ಒಡೆದ ಚೂರುಗಳು

ಮಾತ್ರವಲ್ಲದೆ, ವಶಕ್ಕೆ ಪಡೆದಿದ್ದ ಆಪಾದಿತರ ಎರಡು ಮೋಟಾರು ಸೈಕಲ್ಲು ಹಾಗೂ ಮೃತನ ಒಂದು ಮೋಟಾರು ಸೈಕಲ್ಲು ಒಳಗೊಂಡಂತೆ ಮೂರು ಮೋಟಾರು ಸೈಕಲ್ಲುಗಳು ಇದ್ದವು.

ಪ್ರಾ.ಸಾ. 21, ಎಫ್.ಎಸ್.ಐಗೆ ವಸ್ತುಗಳನ್ನು ಸಾಗಿಸಿದಂಥ ಹೆಡ್‌ಕಾನ್ಸ್‌ಟೇಬಲ್ ಆಗಿರುತ್ತಾನೆ.

ಪ್ರಾ.ಸಾ. 22. ಘಟನೆಯ ಪ್ರತ್ಯಕ್ಷ ಸಾಕ್ಷಿಯಾಗಿದ್ದಾಗ್ಯೂ, ಪ್ರಾಸಿಕ್ಯೂಷನ್‌ನ ವಾದವನ್ನು ಬೆಂಬಲಿಸಿರುವುದಿಲ್ಲ. ಆದ್ದರಿಂದ ಈತನನ್ನು ಪ್ರತಿಕೂಲ ಸಾಕ್ಷ್ಯವಾಗಿ ಪರಿಗಣಿಸಲಾಗಿರುತ್ತದೆ. ಪ್ರಾಸಿಕ್ಯೂಷನ್ ತನ್ನ ವಾದವನ್ನು ಬೆಂಬಲಿಸಲು ಏನನ್ನೂ ತಂದಿರುವುದಿಲ್ಲ. ಆದಾಗ್ಯೂ, ಘಟನೆಯ ದಿನಾಂಕದಂದು, ಪ್ರಾ.ಸಾ. 1 ಮೃತ ವ್ಯಕ್ತಿಯ ಮೋಟಾರು ಸೈಕಲಿನ ಮೇಲೆ ಹೋಗುತ್ತಿದ್ದಳೆಂದು ಪ್ರಾ.ಸಾ. 22 ಸಾಕ್ಷ್ಯ ನೀಡಿರುತ್ತಾನೆ.

ಪ್ರಾ.ಸಾ. 23 ಪೊಲೀಸ್ ಇನ್ಸ್‌ಪೆಕ್ಟರ್ ಆಗಿರುತ್ತಾನೆ. ಈತ ತನಿಖೆಯನ್ನು ಪೂರೈಸಿ, ಆರೋಪ ಪಟ್ಟಿಯನ್ನು ಸಲ್ಲಿಸಿರುತ್ತಾನೆ.

6. ಮರಣೋತ್ತರ ಪರೀಕ್ಷೆಯ ವರದಿ (ನಿಶಾನೆ. ಪಿ.3) ಮತ್ತು ವೈದ್ಯರ (ಪ್ರಾ.ಸಾ. 2) ಸಾಕ್ಷ್ಯವು ಇದು ಕೊಲೆ ಪ್ರಕರಣವಾಗಿರುತ್ತದೆಂಬುದನ್ನು ಸ್ಪಷ್ಟಪಡಿಸಿರುತ್ತವೆ. ಪ್ರಶ್ನಿತ ಸಾವು ಕೊಲೆಯಾಗಿರುತ್ತದೆಂಬುದರ ಬಗ್ಗೆ ಪ್ರತಿವಾದಿ ವಕೀಲರು ಕೂಡ ವಿವಾದ ಮಾಡಿರುವುದಿಲ್ಲ. ಮೃತ ವ್ಯಕ್ತಿಯ ಮೆದುಳಿಗೆ ಪೆಟ್ಟು ಬಿದ್ದು ಗಾಯವಾದ ಪರಿಣಾಮದಿಂದಾಗಿ ಆತ ಪ್ರಜ್ಞೆ ತಪ್ಪಿ ಸಾವು ಸಂಭವಿಸಿರುತ್ತದೆಂದು, ದಾಖಲೆ ಮೇಲಿನ ವೈದ್ಯಕೀಯ ಸಾಕ್ಷ್ಯದಿಂದ ಇದನ್ನು ನೋಡಿದ್ದಾಗ್ಯೂ, ಮೃತ ವ್ಯಕ್ತಿಯು ಮರಣೋತ್ತರ ವರದಿಯ ಮೇರೆಗೆ 10ಕ್ಕಿಂತ ಹೆಚ್ಚಿನ ಗಾಯಗಳಿಂದ ಜರ್ಜರಿತನಾಗಿದ್ದನೆಂಬುದು ತಿಳಿದುಬರುತ್ತದೆ. ಆದಾಗ್ಯೂ, ಶವ ಪಂಚನಾಮೆ ವರದಿಯ ಪ್ರಕಾರ, ಮೃತ ವ್ಯಕ್ತಿಗೆ 13 ಗಾಯಗಳಾಗಿರುತ್ತವೆ. ಎಲ್ಲಾ ಗಾಯಗಳು ಮರಣ ಪೂರ್ವ ಗಾಯಗಳ ಸ್ವರೂಪದಲ್ಲಿರುತ್ತವೆಂದು

ವೈದ್ಯರು ಸಾಕ್ಷ್ಯವನ್ನು ನೀಡಿರುತ್ತಾರೆ. ಮೃತ ವ್ಯಕ್ತಿಯ ಕಣ್ಣು ತಲೆ ಹಾಗೂ ಹಿಂದಲೆಯ ಮೂಳೆಯು ಮುರಿದಿರುತ್ತದೆ. ಮೃತ ವ್ಯಕ್ತಿಯ ತಲೆ ಬುರುಡೆ ಹಾನಿಗೊಳಗಾಗಿರುತ್ತದೆ. ಗಾಯಗಳ ಪಟ್ಟಿಯನ್ನು ನೋಡುವಾಗ, ಮೃತ ವ್ಯಕ್ತಿಯ ತಲೆಯ ಮೇಲಿನ ಎಲ್ಲಾ ಗಾಯಗಳು ಮಾರಣಾಂತಿಕ ಗಾಯಗಳೇ ಆಗಿರುತ್ತವೆ. ಮರಣೋತ್ತರ ಪರೀಕ್ಷೆಯ ವರದಿಯಲ್ಲಿನ ಗಾಯ ಸಂ. 1 ರಿಂದ 9 ರವರೆಗಿನ ಗಾಯಗಳು ಮಚ್ಚಿನಿಂದ ಕತ್ತರಿಸಿ ಸೀಳಿದ ಗಾಯಗಳಾಗಿರುತ್ತವೆ. ಗಾಯ ಸಂ. 10 ಉಜ್ಜುಗಾಯ ವಾಗಿರುತ್ತದೆ. ಹಾಗಾಗಿ ಪ್ರಶ್ನಿತ ಸಾವು ಕೊಲೆಯೆಂದು ಅಧಿವಿಚಾರಣಾ ನ್ಯಾಯಾಲಯವು ತೀರ್ಮಾನಿಸಿರುವ ನಿರ್ಣಯವು ಸಮರ್ಥನೀಯವಾಗಿರುತ್ತದೆ.

7. ಅಪರಾಧ ಎಸಗಿರುವುದಕ್ಕೆ ಸಂಬಂಧಿಸಿದ ಉದ್ದೇಶವನ್ನು ಕುರಿತಂತೆ, ಪ್ರಾ.ಸಾ. 1, 6, 11, 12 ಮತ್ತು 18 ರವರುಗಳು ನ್ಯಾಯಾಲಯದ ಎದುರು ಸಾಕ್ಷ್ಯ ನೀಡಿರುತ್ತಾರೆ. ಈ ಎಲ್ಲಾ ಸಾಕ್ಷ್ಯಗಳು, ಆಪಾದಿತ ಸಮುದಾಯದ ವ್ಯಕ್ತಿಗಳು, ಮೃತ ವ್ಯಕ್ತಿಯ ಸಮುದಾಯಕ್ಕೆ ಸೇರಿದ ಹೆಣ್ಣುಮಕ್ಕಳು/ ಮಹಿಳೆಯರನ್ನು ಸದಾ ಚುಡಾಯಿಸುತ್ತಿದ್ದರೆಂದು ನಿರಂತರವಾಗಿ ಮತ್ತು ಏಕರೂಪವಾಗಿ ಸಾಕ್ಷ್ಯವನ್ನು ನೀಡಿರುತ್ತಾರೆ. ಈ ಸಂಬಂಧದಲ್ಲಿ, ಇಂಥ ನಡತೆಯನ್ನು ಮುಂದುವರೆಸದಿರಲು ಕೋರಿಕೆ ಹಾಗೂ ಎಚ್ಚರಿಕೆ ಎರಡನ್ನೂ ನೀಡಿದ್ದಾಗ್ಯೂ, ಆಪಾದಿತರು ಹಾಗೂ ಅವರುಗಳ ಅನುಯಾಯಿಗಳ ನಡತೆಯಲ್ಲಿ ಯಾವುದೇ ಸುಧಾರಣೆ ಕಂಡುಬಂದಿರುವುದಿಲ್ಲ. ಎರಡು ಗುಂಪುಗಳ ನಡುವೆ ಈ ಕಾರಣಕ್ಕಾಗಿಯೇ ಆಗಾಗ ಜಗಳಗಳು ಸಂಭವಿಸುತ್ತಿದ್ದವು. ಮೃತ ವ್ಯಕ್ತಿಯೇ ಕಾನೂನುಬಾಹಿರ ಚಟುವಟಿಕೆಯಲ್ಲಿ ತೊಡಗಿದ್ದಂಥ ಆಪಾದಿತರನ್ನು ಹಾಗೂ ಅವರ ಅನುಯಾಯಿಗಳನ್ನು ವಿರೋಧಿಸುತ್ತಿದ್ದು, ಅವರ ವಿರುದ್ಧ ದೂರನ್ನೂ ಸಹ ದಾಖಲಿಸಿದ್ದರಿಂದಲೇ, ಆಪಾದಿತರು ಆತನ ವಿರುದ್ಧ ಸೇಡು ತೀರಿಸಿಕೊಂಡಿರುತ್ತಾರೆ. ಮೇಲೆ ಹೇಳಿದ ಸಾಕ್ಷೀದಾರರ ಸಾಕ್ಷ್ಯವು, ಅಪರಾಧ ಎಸಗಿರುವ ಆಪಾದಿತರ ಉದ್ದೇಶವನ್ನು ಸ್ಪಷ್ಟವಾಗಿ ರುಜುವಾತುಪಡಿಸುತ್ತದೆ.

8. ಪ್ರಶ್ನಿತ ಘಟನೆಯ ಸಂಬಂಧದೊಂದಿಗಿನ ಪ್ರಾಸಿಕ್ಯೂಷನ್ ಪ್ರಕರಣವು, ಸಾಕ್ಷಿದಾರರು ಅಂದರೆ ಪ್ರಾ.ಸಾ. 1, 3 ಮತ್ತು 5ರ ಪ್ರತ್ಯಕ್ಷ ಸಾಕ್ಷ್ಯದ ಮೇಲೆ ಅವಲಂಬಿಸಿರುತ್ತದೆ.

ಪ್ರಾ.ಸಾ. 1 ಮೃತ ವ್ಯಕ್ತಿಯ ಮಗಳಾಗಿರುತ್ತಾಳೆ. ಘಟನೆ ನಡೆದಾಗ ಆಕೆ ಸುಮಾರು 19–20 ವರ್ಷಗಳ ವಯೋಮಾನದವಳಾಗಿರುತ್ತಾಳೆ. ಈಕೆ ಮೊದಲನೆ ವರ್ಷದ ಪದವಿ ಕೋರ್ಸ್‌ನಲ್ಲಿ ವ್ಯಾಸಾಂಗ ಮಾಡುತ್ತಿದ್ದಳು. ಪ್ರಾಸಿಕ್ಯೂಷನ್ ಪ್ರಕಾರ, ಪ್ರಶ್ನಿತ ಘಟನೆಯು, ಬೆಳಿಗ್ಗೆ ಸುಮಾರು 10.00 ಗಂಟೆಗೆ ನಡೆದಿದ್ದು, ಈಕೆ ನಿಶಾನೆ ಪಿ.1 ಆಗಿರುವ ದೂರನ್ನು ಬೆಳಿಗ್ಗೆ 11.00 ಗಂಟೆಗೆ ಅಂದರೆ ಘಟನೆ ನಡೆದ ಒಂದು ಗಂಟೆಯೊಳಗೆ ದಾಖಲಿಸಿರುತ್ತಾರೆ. ನಿಶಾನೆ ಪಿ. 1, ಅಪರಾಧ ಎಸಗಿರುವುದಕ್ಕೆ ಸಂಬಂಧಿಸಿದ ಉದ್ದೇಶವನ್ನು ಮಾತ್ರವಲ್ಲದೆ, ಪ್ರಶ್ನಿತ ಘಟನೆ ಕುರಿತಂತೆ ವಿವರಗಳನ್ನು ಬಹಿರಂಗಪಡಿಸುತ್ತದೆ. ಫಿರ್ಯಾದುದಾರಳು ಘಟನೆ ನಡೆದ ಸ್ಥಳದಲ್ಲಿ ಪ್ರತಿಯೊಬ್ಬ ಆಪಾದಿತನ ಕೃತ್ಯಗಳು ಹಾಗೂ ಅವರ ರೀತಿಗಳನ್ನು ನಿರ್ದಿಷ್ಟವಾಗಿ ಹೇಳಿರುತ್ತಾಳೆ. ಪ್ರಾ.ಸಾ. 1, ತಾನು ತನ್ನ ಕುಟುಂಬದ ಸದಸ್ಯರೊಂದಿಗೆ ಪೊಲೀಸ್ ಠಾಣೆಗೆ ಬಂದು ತಾನೇ ಸ್ವತಃ ನಿಶಾನೆ ಪಿ. 1 ದೂರನ್ನು ಬರೆದು, ಅದನ್ನು ಸಲ್ಲಿಸಿರುತ್ತಾಳೆ. ನಿಶಾನೆ ಪಿ. 1, ಪ್ರಾ.ಸಾ. 1 ಸಾಮಾನ್ಯವಾಗಿ ಬಸ್ಸಿನಲ್ಲಿಯೇ ಕಾಲೇಜಿಗೆ ಹೋಗುತ್ತಿದ್ದುದಾಗಿ, ಆದರೆ ಕಾಲೇಜಿಗೆ ಹೋಗುವಾಗ ಒಂದು ವೇಳೆ ವಿಳಂಬವಾದಾಗ ಆಕೆಯ ತಂದೆ (ಮೃತ ವ್ಯಕ್ತಿ)ಯೇ ಕಾಲೇಜಿನ ಆವರಣದವರೆಗೂ ಬಿಡುತ್ತಿದ್ದುದಾಗಿ ಸ್ಪಷ್ಟಪಡಿಸುತ್ತದೆ. ಘಟನೆ ನಡೆದ ಆ ದಿನದಂದು, ಭದ್ರಾವತಿ ಪಟ್ಟಣದ ಗಾಂಧಿನಗರ ವೃತ್ತಕ್ಕೆ ಅವರು ತಲುಪಿದಾಗ, ಮೃತ ವ್ಯಕ್ತಿಯ ಮೋಟಾರು ಸೈಕಲ್ಲು, ತಾಂತ್ರಿಕ ದೋಷದಿಂದ ನಿಂತುಹೋಗಿರುತ್ತದೆ. ಹಾಗಾಗಿ, ಮೃತ ವ್ಯಕ್ತಿಯ ಮೋಟಾರು ಸೈಕಲನ್ನು ಗ್ಯಾರೇಜಿಗೆ ಬಿಡಲು ನೂಕಿಕೊಂಡು ಹೋಗುತ್ತಿರುತ್ತಾರೆ. ಪಿ.ಡಬ್ಲ್ಯು. 1 ನಡೆಯುತ್ತಾ ಮೃತ ವ್ಯಕ್ತಿಯನ್ನು ಅನುಸರಿಸಿರುತ್ತಾಳೆ. ಆ ಸಮಯದಲ್ಲಿ, ಆಪಾದಿತನು ಎರಡು ಮೋಟಾರು ಸೈಕಲುಗಳು ಅಂದರೆ ಬಜಾಜ್ ಡಿಸ್ಕವರಿ ಮತ್ತು ಟಿವಿಎಸ್ ವಾಹನಗಳು ಇವುಗಳಲ್ಲಿ ಬಂದಿರುತ್ತಾರೆ. ಆಪಾದಿತ ವೆಂಕಟೇಶ್ ಒಂದು ಬಿಳಿಯ ಚೀಲವನ್ನು ತಂದಿರುತ್ತಾನೆ. ಕಬ್ಬಿಣದ ಸರಳನ್ನು ಹಿಡಿದಿದ್ದ ಆಪಾದಿತ ಪ್ರಕಾಶ್, ಮೃತ ವ್ಯಕ್ತಿಯು, ದಾರಿಯಲ್ಲಿ ಬರುತ್ತಿದ್ದು, ಆತನನ್ನು ಬಿಡಬಾರದೆಂದು ಇತರ ಆಪಾದಿತರಿಗೆ ಹೇಳಿರುತ್ತಾನೆ. ಹಾಗೆ ಹೇಳುತ್ತಾ, ಆಪಾದಿತ ಸಂ. 2 ರಿಂದ 6 ರವರುಗಳು ಬಿಳಿ ಚೀಲದಿಂದ ಮಚ್ಚುಗಳನ್ನು ಹೊರತೆಗೆದು ಮೃತ ವ್ಯಕ್ತಿಯನ್ನು ಹೊಡೆಯಲು ಆರಂಭಿಸಿರುತ್ತಾರೆ. ಮೊಟ್ಟಮೊದಲನೆಯದಾಗಿ, ಆಪಾದಿತ ಸಂ. 1 ತನ್ನ ಬೆನ್ನಮೇಲೆ ಇದ್ದಂಥ

ಕಬ್ಬಿಣದ ಸರಳಿನೊಂದಿಗೆ ಮೃತ ವ್ಯಕ್ತಿಯನ್ನು ಥಳಿಸಲು ಆರಂಭಿಸುತ್ತಾನೆ. ಅದಾದ ತರುವಾಯ, ಎಲ್ಲಾ ಆಪಾದಿತರ ಮೃತ ವ್ಯಕ್ತಿಯನ್ನು ಮಚ್ಚಿನಿಂದ ಹೊಡೆಯಲು ಆರಂಭಿಸಿರುತ್ತಾರೆ. ಅಲ್ಲದೆ, ಫಿರ್ಯಾದುದಾರಳು ತನ್ನ ಫಿರ್ಯಾದಿನಲ್ಲಿ, ತಾನು ತುಂಬಾ ಹೆದರಿದ್ದರಿಂದ ತನಗೆ ಏನು ಮಾಡಬೇಕೆಂದು ತೋಚಲಿಲ್ಲವೆಂದೂ ಹಾಗೂ ಆ ಘಟನೆ ನಡೆಯುವಾಗ ಅಲ್ಲೇ ಇದ್ದಂಥ ವೆಂಕಟೇಶ್ (ಪ್ರಾ.ಸಾ. 22) ಮತ್ತು ಸುಬ್ಬಣ್ಣ (ಸಿ.ಡಬ್ಲ್ಯು.6) ಹಾಗೂ ಯಾವೊಬ್ಬ ದಾರಿಹೋಕರೂ ಮೃತನನ್ನು ಉಳಿಸಲು ಮಧ್ಯೆ ಪ್ರವೇಶಿಸಲಿಲ್ಲವೆಂದೂ ಸ್ಪಷ್ಟಪಡಿಸಿರುತ್ತಾಳೆ. ಪ್ರಾ.ಸಾ. 1, 19–20 ವರ್ಷದ ವಯೋಮಾನದ ಚಿಕ್ಕ ಹುಡುಗಿಯಾಗಿರುವುದರಿಂದ ತನಗೆ ಏನು ಮಾಡಬೇಕೆಂದು ತಿಳಿಯದೆ, ಹೆದರಿಕೆಯಿಂದ ಮನೆಗೆ ಹೋಗಿ, ತನ್ನ ಸಹೋದರ ಹಾಗೂ ಚಿಕ್ಕಪ್ಪನಿಗೆ ವಿಷಯ ತಿಳಿಸಿರುತ್ತಾಳೆ. ಆ ತರುವಾಯ, ಅವರೆಲ್ಲರೂ ಪೊಲೀಸ್ ಠಾಣೆಗೆ ಬಂದು ಫಿರ್ಯಾದನ್ನು ದಾಖಲಿಸಿರುತ್ತಾರೆ. ನಿಶಾನೆ ಪಿ. 1 ರಿಂದ ಇದು ಆಪಾದಿತರ ಹೆಸರುಗಳನ್ನು ಒಳಗೊಂಡಿರುತ್ತದೆಂಬುದು ಫಿರ್ಯಾದನ್ನು ಪ್ರಶ್ನಿತ ಘಟನೆ ನಡೆದ ಒಂದು ಘಂಟೆಯೊಳಗೆ ದಾಖಲಿಸಲಾಗಿರುತ್ತದೆಂಬುದು; ಆಪಾದಿತ ಸಂ.1 ಕಬ್ಬಿಣದ ಸರಳಿನಿಂದ ಮೃತನನ್ನು ಹೊಡೆದಿರುತ್ತಾನೆಂದೂ ಹಾಗೂ ಸಂಖ್ಯೆ 2 ರಿಂದ 6 ರ ವರೆಗಿನ ಆಪಾದಿತರು ಮೃತ ವ್ಯಕ್ತಿಯನ್ನು ಮಚ್ಚುಗಳಿಂದ ಹೊಡೆದಿರುತ್ತಾರೆಂದೂ ಸ್ಪಷ್ಟವಾಗುತ್ತದೆ. ಅಲ್ಲದೆ, ಫಿರ್ಯಾದುದಾರಳು ಅಪರಾಧ ಮಾಡಿರುವುದಕ್ಕೆ ಸಂಬಂಧಿಸಿದಂತೆ ನ್ಯಾಯಾಲಯದ ಎದುರಿಗಿರುವ ಆಪಾದಿತರನ್ನು ಉದ್ದೇಶಪೂರ್ವಕವಾಗಿ ಎತ್ತಿಕಟ್ಟಿರುವಂಥ ಇತರೆ ನಾಲ್ವರು ವ್ಯಕ್ತಿಗಳ ವಿರುದ್ಧ ಕ್ರಮ ತೆಗೆದುಕೊಳ್ಳಬೇಕೆಂದು ತನ್ನ ಫಿರ್ಯಾದಿನಲ್ಲಿ ನಮೂದಿಸಿರುವುದನ್ನು ಗಮನಿಸಿಕೊಳ್ಳುವುದು ಯುಕ್ತವಾದುದಾಗಿರುತ್ತದೆ.

ಪ್ರಾ.ಸಾ. 1 ರವರು ಸಲ್ಲಿಸಿದ ನಿಶಾನೆ ಪಿ. 1 ರಲ್ಲಿರುವ ಹೇಳಿಕೆಯನ್ನು ನ್ಯಾಯಾಲಯದ ಮುಂದಿರುವ ಪ್ರಾ.ಸಾ. 1ರ ಹೇಳಿಕೆಯು ಬೆಂಬಲಿಸುತ್ತದೆ. ಈಕೆ ಆ ಘಟನೆಯು ಹೇಗೆ ನಡೆಯಿತೆಂಬುದನ್ನು ಪುನರುಚ್ಚರಿಸಿರುತ್ತಾಳೆ. ಈಕೆ ಪ್ರತಿಯೊಬ್ಬ ಆಪಾದಿತನ ಅಪಕೃತ್ಯಗಳನ್ನು ಬಹಿರಂಗಪಡಿಸಿರುತ್ತಾಳೆ. ಅಲ್ಲದೆ, ಆಕೆ ಅಪರಾಧ ಎಸಗಿರುವುದಕ್ಕೆ ಸಂಬಂಧಿಸಿದ ಉದ್ದೇಶ ಕುರಿತಂತೆ ಸಾಕ್ಷ್ಯ ನೀಡಿರುತ್ತಾಳೆ. ಈಕೆ

ಆಪಾದಿತರಿಗೆ ಸಂಬಂಧಿಸಿದ, ಆ ಸ್ಥಳದಲ್ಲಿ ಬಿದ್ದಿದ್ದಂಥ ಮೊಬೈಲ್ ಪೋನ್, ಗಡಿಯಾರ, ಚಪ್ಪಲಿಗಳು ಮುಂತಾದವುಗಳನ್ನು ಗುರುತಿಸಿರುತ್ತಾಳೆ. ಅಲ್ಲದೆ, ಈಕೆ ಆಪಾದಿತರ ಎರಡು ಮೋಟಾರು ಸೈಕಲ್ಲುಗಳನ್ನು ಹಾಗೂ ಮಚ್ಚುಗಳ ಮುರಿದ ಚೂರುಗಳನ್ನು ಗುರುತಿಸಿರುತ್ತಾಳೆ. ಪಾಟೀ ಸವಾಲಿನಲ್ಲಿ, ಪ್ರತಿಪಕ್ಷದವರು, ಪ್ರಾ.ಸಾ.1 ಆದ ಇವಳ ಕಾಲೇಜು ಬೆಳಿಗ್ಗೆ 8.00 ಗಂಟೆಗೆ ಆರಂಭವಾಗುತ್ತದೆಂದು ಹೇಳುತ್ತಾ, ಘಟನೆ ನಡೆದ ಆ ಸಮಯದಲ್ಲಿ ಆಕೆ ಇರಲಿಲ್ಲವೆಂದು ಆಕೆಯಿಂದಲೇ ಹೇಳಿಸಲು ಪ್ರಯತ್ನಿಸಿರುತ್ತಾರೆ. ಆದರೆ, ಪ್ರಾ.ಸಾ. 1 ತನ್ನ ಪಾಟೀಸವಾಲಿನಲ್ಲಿ ಘಟನೆ ನಡೆದ ದಿನ ಬುಧವಾರವಾಗಿದ್ದು, ಅಂದು ತನಗೆ ಬೆಳಿಗ್ಗೆ 10.00 ಗಂಟೆಯಿಂದ ಮೊದಲ ತರಗತಿ ಆರಂಭವಾಗುತ್ತಿತ್ತೆಂದು ಸಾಕ್ಷ್ಯ ನೀಡಿ, ಪ್ರತಿವಾದಿಗಳ ವಾದವನ್ನು ವಿರೋಧಿಸಿರುತ್ತಾಳೆ. ಪಾಟೀ ಸವಾಲಿನಲ್ಲೂ ಆಕೆ ಪ್ರಶ್ನಿತ ಘಟನೆಯನ್ನೇ ಪುನರುಚ್ಚರಿಸಿರುತ್ತಾಳೆ. ಈಕೆ ನ್ಯಾಯಾಲಯದಲ್ಲೂ ಕೂಡ ಆಪಾದಿತರನ್ನು ಗುರುತಿಸಿರುತ್ತಾಳೆ. ಮುಂದುವರೆದು, ಈಕೆ ಆಪಾದಿತರ ಹಿಡಿತದಿಂದ ಪಾರಾಗಲೂ ಸಹ ಮೃತ ವ್ಯಕ್ತಿಯು ಪ್ರಯತ್ನಿಸಿ ಸುಮಾರು 12–13 ಅಡಿಯಷ್ಟು ಮುಂದೆ ಓಡಿದ್ದಾಗ್ಯೂ, ಆಪಾದಿತ ಸಂ. 1 ಹೊಡೆದ ಮೊದಲ ಏಟಿಗೆ ತನ್ನ ತಂದೆ ನೆಲಕ್ಕುರುಳಿರುತ್ತಾರೆಂದೂ ಆ ತರುವಾಯ ಎಲ್ಲಾ ಇತರೆ ಆಪಾದಿತರು ಮಚ್ಚುಗಳಲ್ಲಿ ಆತನನ್ನು ಹೊಡೆದಿರುತ್ತಾರೆಂದೂ ತನ್ನ ಪಾಟೀ ಸವಾಲಿನಲ್ಲಿ ಸ್ಪಷ್ಟಪಡಿಸಿರುತ್ತಾಳೆ. ಈಕೆಗೆ ಹೆದರಿಕೆಯುಂಟಾಗಿ, ತಾನು ಏನು ಮಾಡಬೇಕೆಂದು ತಿಳಿಯದೆ, ಕೂಡಲೇ ಪ್ರಾ.ಸಾ. 22 ಮತ್ತು ಶ್ರೀಯುತ ಸುಬ್ರಮಣಿಯವರೊಡನೆ ತನ್ನ ಮನೆಗೆ ಹೋಗಿರುತ್ತಾಳೆ. ಮನೆಗೆ ಹೋದ ಕೂಡಲೇ, ಮನೆ ಮಂದಿಗೆಲ್ಲಾ ಘಟನೆ ಕುರಿತಂತೆ ತಿಳಿಸಿ, ತರುವಾಯ, ಫಿರ್ಯಾದನ್ನು ದಾಖಲಿಸಿರುತ್ತಾರೆ. ಈಕೆ ನಿಶಾನೆ ಪಿ. 1 ರ ಪ್ರಕಾರ ಪೊಲೀಸ್ ಠಾಣೆಯಲ್ಲಿ ಫಿರ್ಯಾದನ್ನು ದಾಖಲಿಸಿರುವುದಕ್ಕೆ ಸಂಬಂಧಿಸಿದಂತೆ ಸಾಕ್ಷ್ಯ ನೀಡಿರುತ್ತಾಳೆ. ನಿಶಾನೆ ಪಿ.1 ಫಿರ್ಯಾದು ಆಕೆಯ ಸ್ವಹಸ್ತಾಕ್ಷರದಲ್ಲಿರುತ್ತದೆ. ನಿಶಾನೆ ಪಿ.1 ರ ವಸ್ತುವಿಷಯವನ್ನು ಓದಿದ ತರುವಾಯ, ಈಕೆ ಅದನ್ನು ದಾಖಲಿಸಿರುತ್ತಾಳೆ.

9. ಪ್ರಾ.ಸಾ. 3 ಮತ್ತು 5 ಪ್ರತ್ಯಕ್ಷ ಸಾಕ್ಷಿಗಳಾಗಿರುತ್ತಾರೆ. ಪ್ರಾ.ಸಾ. 3 ಭದ್ರಾವತಿಯಲ್ಲಿರುವ ಬ್ಲೂ ಸ್ಟಾರ್ ರೆಸ್ಟೋರೆಂಟ್‌ನ ಮಾಲೀಕನಾಗಿರುತ್ತಾನೆ. ಈತ

ಮೃತ ವ್ಯಕ್ತಿಯನ್ನೂ ಮತ್ತು ಆಪಾದಿತರನ್ನೂ ಬಲ್ಲವನಾಗಿರುತ್ತಾನೆ. ಈತ ಘಟನೆ ನಡೆದ ದಿನದಂದು ಅಂದರೆ 11.03.2009 ರಂದು ತನ್ನ ಹೋಟೇಲ್‌ನ ಮುಂದೆ ನಿಂತಿದ್ದಾಗ, ಮೃತ ವ್ಯಕ್ತಿಯನ್ನು ಹಿಡಿಯಲು ಆಪಾದಿತರು ಕೂಗಾಡಿದ್ದನ್ನು ಕೇಳಿಸಿಕೊಂಡು, ಘಟನೆ ನಡೆಯುತ್ತಿದ್ದ ಕಡೆ ನೋಡುತ್ತಿದ್ದಂತೆ ರಸ್ತೆ ವಿಭಜಕದ ಬಳಿ ಮೃತವ್ಯಕ್ತಿ ಬೀಳುತ್ತಾನೆ. ಆ ಸಮಯದಲ್ಲಿ ಆಪಾದಿತ ಸಂ. 1 ಕಬ್ಬಿಣದ ಸರಳಿನಿಂದ ಮೃತ ವ್ಯಕ್ತಿಯನ್ನು ಹೊಡೆಯುತ್ತಾನೆ ಹಾಗೂ ಆ ತರುವಾಯ, ಇತರೆ ಆಪಾದಿತರು ಮಚ್ಚುಗಳಿಂದ ಮೃತ ವ್ಯಕ್ತಿಯನ್ನು ಹೊಡೆದಿರುತ್ತಾರೆಂದು ಸಾಕ್ಷಿ ನೀಡಿರುತ್ತಾನೆ. ಅಲ್ಲದೆ, ಪ್ರಾ.ಸಾ. 3 ಅಪರಾಧ ಕೃತ್ಯ ನಡೆಯುತ್ತಿದ್ದ ಸ್ಥಳದಲ್ಲಿ ಒಬ್ಬ ಹುಡುಗಿ ನಿಂತಿದ್ದನ್ನೂ ಕಂಡಿದ್ದಾಗಿ ಸಾಕ್ಷ್ಯ ನೀಡಿರುತ್ತಾನೆ. ಮುಂದುವರೆದು, ಈತನನ್ನು ಮುಖ್ಯಸ್ಥರು ಪರೀಕ್ಷಿಸುವಾಗ, ಸದರಿ ಘಟನೆಯಲ್ಲಿ ಒಂದು ಮಚ್ಚು ಒಡೆದು ಚೂರಾಗಿ ಬಿತ್ತೆಂದೂ ಸಹ ಸ್ಪಷ್ಟಪಡಿಸಿರುತ್ತಾನೆ.

ಪಾಟೀ ಸವಾಲಿನಲ್ಲಿ, ಪ್ರಾ.ಸಾ. 3 ತಾನು ಕೆಲವೇ ಆಪಾದಿತರನ್ನು ಮಾತ್ರ ತಿಳಿದಿರುವುದಾಗಿಯೂ, ಆಪಾದಿತರ ಉಪವೃತ್ತಿ ಏನೆಂಬುದು ತನಗೆ ತಿಳಿದಿಲ್ಲವೆಂದೂ; ತನ್ನ ರೆಸ್ಟೋರೆಂಟ್‌ನ್ನು ಪ್ರತಿ ದಿನ ಮಧ್ಯಾಹ್ನ ಸುಮಾರು 12 ಗಂಟೆ ವರೆಗೆ ತೆರೆದಿರುತ್ತೇನೆಂದೂ , ರೆಸ್ಟೋರೆಂಟ್ ಶ್ರೀಯುತ ಕೃಷ್ಣಮೂರ್ತಿಯವರನ್ನು ಒಳಗೊಂಡಂತೆ ಇಬ್ಬರು ಪಾಲುದಾರರನ್ನು ಹೊಂದಿದ್ದು, ಆ ದಿನದಂದು, ಕೃಷ್ಣಮೂರ್ತಿ ರೆಸ್ಟೋರೆಂಟ್‌ಗೆ ಬಂದಿರಲಿಲ್ಲವಾದ್ದರಿಂದ ತಾನೇ ರೆಸ್ಟೋರೆಂಟ್‌ನ ಪ್ರಭಾರದಲ್ಲಿದ್ದನೆಂದೂ ಒಪ್ಪಿಕೊಂಡಿರುತ್ತಾನೆ. ಮುಂದುವರೆದು, ಘಟನೆ ನಡೆದ ತರುವಾಯವೂ ತನ್ನ ರೆಸ್ಟೋರೆಂಟನ್ನು ಎಂದಿನಂತೆಯೇ ತೆರೆಯುತ್ತಿರುವುದಾಗಿಯೂ ಒಪ್ಪಿಕೊಂಡಿರುತ್ತಾನೆ. ವಾಸ್ತವವಾಗಿ, ಪ್ರತಿವಾದಿಗಳಿಂದ ಪ್ರಾ.ಸಾ. 3ರವರ ಪಾಟೀಸವಾಲಿನಲ್ಲಿ ಏನನ್ನೂ ಹೊರತೆಗೆಯಲಾಗಲಿಲ್ಲ. ಪ್ರಾ.ಸಾ. 3 ಸಾಕ್ಷ್ಯವು ಪ್ರಾ.ಸಾ.1ರ ಸಾಕ್ಷ್ಯವನ್ನು ಸಂಪೂರ್ಣವಾಗಿ ಬೆಂಬಲಿಸುತ್ತದೆ.

10. ಪ್ರಾ.ಸಾ. 5 ಮತ್ತೊಂದು ಪ್ರತ್ಯಕ್ಷ ಸಾಕ್ಷಿಯಾಗಿರುತ್ತಾನೆ. ಘಟನೆ ನಡೆದ ಸ್ಥಳದಲ್ಲಿನ ಗಾಂಧಿ ವೃತ್ತದಲ್ಲಿ ಈತ ಪಾನ್‌ಬೀಡಾ ಅಂಗಡಿಯನ್ನು ನಡೆಸುತ್ತಿದ್ದನು. ಈತ ಮೃತವ್ಯಕ್ತಿಯನ್ನು ಹಾಗೂ ಆಪಾದಿತರನ್ನು ಬಲ್ಲವನಾಗಿರುತ್ತಾನೆ. ಇವರ

ಪ್ರಕಾರ, 11.03.2009 ರಂದು ಬೆಳಿಗ್ಗೆ 9.00 ಗಂಟೆಗೆ ಆಪಾದಿತರು ಸದರಿ ವೃತ್ತದಲ್ಲಿ ಹಾಜರಿದ್ದರು. ಆಗ ಆತ ಆಪಾದಿತರಿಗೆ ನೀವೆಲ್ಲಾ ಏಕೆ ಕೆಲಸಕ್ಕೆ ಹೋಗುತ್ತಿಲ್ಲವೆಂದು ಕೇಳಿದಾಗ, ಅಂದು ತಮಗೆ ಯಾವುದೇ ಕೆಲಸವಿಲ್ಲವೆಂದು ಹೇಳಿರುತ್ತಾರೆ. ಅದೇ ಸಮಯಕ್ಕೆ ಮೃತ ವ್ಯಕ್ತಿಯು ಮೋಟಾರು ಸೈಕಲ್ಲಿನಲ್ಲಿ ತನ್ನ ಮಗಳಿನೊಂದಿಗೆ ಬಂದಿರುತ್ತಾನೆ. ಮೋಟಾರು ಸೈಕಲ್ಲು ತಾಂತ್ರಿಕ ದೋಷದಿಂದ ನಿಂತುಬಿಟ್ಟಿರುತ್ತದೆ. ಮೃತ ವ್ಯಕ್ತಿಯು ಅದನ್ನು ಗ್ಯಾರೇಜಿಗೆ ಮುಟ್ಟಿಸಲು ತಳ್ಳಲು ಆರಂಭಿಸಿರುತ್ತಾನೆ; ಕೂಡಲೇ, ಪ್ರಾ.ಸಾ. 1 ಅಳಲು ಆರಂಭಿಸುತ್ತಾಳೆ. ಈತನಿಗೆ ಆಪಾದಿತನು, ಮೃತ ವ್ಯಕ್ತಿಗೆ ಹೊಡೆಯಲು ಆರಂಭಿಸಿದ್ದು ಕೇಳಿಸುತ್ತದೆ; ಮೃತ ವ್ಯಕ್ತಿಯು ತಪ್ಪಿಸಿಕೊಳ್ಳಲು ಪ್ರಯತ್ನಿಸಿದ್ದಾಗ್ಯೂ, ಎಲ್ಲಾ ಆಪಾದಿತರೂ ಮೃತ ವ್ಯಕ್ತಿಯನ್ನು ಸುತ್ತುವರೆದು, ಹೊಡೆದಿರುತ್ತಾರೆ. ಪಿ.ಡಬ್ಲ್ಯು. 1 ನ್ನು ಅಪರಾಧ ನಡೆದ ಸ್ಥಳದಲ್ಲಿದ್ದಂಥ ಪ್ರಾ.ಸಾ. 5ನ್ನು ಒಳಗೊಂಡಂತೆ ಇತರೆ ವ್ಯಕ್ತಿಗಳು ಸಮಾಧಾನ ಮಾಡಿರುತ್ತಾರೆ.

ಪಾಟೀ ಸವಾಲಿನಲ್ಲಿ ಪ್ರಾ.ಸಾ. 5 ಮೃತ ವ್ಯಕ್ತಿಯ ಕೊಲೆಯ ಬಗ್ಗೆ ಕೇಳಿಸಿಕೊಂಡ ತರುವಾಯ ಅಂಗಡಿಯ ಷಟರ್‌ನ್ನು ಎಳೆದು ಅಂಗಡಿಯನ್ನು ಮುಚ್ಚಿದೆನೆಂದು ಒಪ್ಪಿಕೊಂಡಿರುತ್ತಾನೆ. ಆ ಸಮಯದಲ್ಲಿ, ಘಟನೆ ಸ್ಥಳದ ಕಡೆ ನೋಡುತ್ತಿದ್ದಂತೆ, ಸಾಕಷ್ಟು ಜನ ಅಲ್ಲಿ ಗುಂಪುಗೂಡಿರುತ್ತಾರೆ. ಘಟನೆ ನಡೆದ ತರುವಾಯ ಎಂದಿನಂತೆ ಯಾವಾಗಲೂ ತಾನು ಅಂಗಡಿಯನ್ನು ತೆರೆದಿರುತ್ತಾನೆ. ಈತ ಪೊಲೀಸರು ತನ್ನ ಹೇಳಿಕೆಯನ್ನು ದಾಖಲಿಸಿಕೊಳ್ಳುವವರೆಗೂ ಯಾರ ಮುಂದೆಯೂ ಘಟನೆ ಕುರಿತಂತೆ ಬಹಿರಂಗಪಡಿಸಿರುವುದಿಲ್ಲ; ಮೊದಲ ಬಾರಿಗೆ ನ್ಯಾಯಾಲಯದ ಎದುರು, ಮೃತ ವ್ಯಕ್ತಿಯನ್ನು ಎಲ್ಲಾ ಆಪಾದಿತರು ಸುತ್ತುವರೆದು ಹೊಡೆದರೆಂದು ಸಾಕ್ಷ್ಯ ನೀಡಿರುತ್ತಾನೆ. ಮುಂದುವರೆದು, ಮೃತ ವ್ಯಕ್ತಿಯು, ತನ್ನ ಆಲೆಮನೆಯಲ್ಲಿ ಕೆಲಸಕ್ಕೆ ಬರುತ್ತಿದ್ದಂಥ ಮಹಿಳೆಯರು/ಹೆಣ್ಣು ಮಕ್ಕಳೊಂದಿಗೆ ಅಕ್ರಮ ಸಂಬಂಧವನ್ನು ಇಟ್ಟುಕೊಂಡಿದ್ದರಿಂದ ಈ ಕಾರಣಕ್ಕಾಗಿ ಸಾಕಷ್ಟು ಜನರು ಮೃತ ವ್ಯಕ್ತಿಯ ವಿರುದ್ಧ ವಿರೋಧೀ ಭಾವವನ್ನು ಹೊಂದಿದ್ದರೆಂದೂ ಸಹ ಸಾಕ್ಷ್ಯ ನೀಡಿರುತ್ತಾನೆ.

11. ಮೇಲೆ ಹೇಳಿದಂತೆ, ಪ್ರತಿವಾದಿ ವಕೀಲರು ಪ್ರಾ.ಸಾ. 3 ಮತ್ತು 5ರ ಸಾಕ್ಷ್ಯಗಳನ್ನು ಸುಮಾರು 40 ದಿನಗಳ ತರುವಾಯ ಅವರ ಹೇಳಿಕೆಗಳನ್ನು ದಾಖಲಿಸಿಕೊಂಡಿರುವುದರಿಂದ ಅಧೀನ ನ್ಯಾಯಾಲಯವು ನಂಬಿರುವುದಿಲ್ಲವೆಂದು ವಾದಿಸಿರುತ್ತಾರೆ. ಈ ಸಾಕ್ಷೀದಾರರ ಹೇಳಿಕೆಗಳನ್ನು ಪ್ರಶ್ನಿತ ಘಟನೆಯ ಸುಮಾರು 40 ದಿನಗಳ ತರುವಾಯ ದಾಖಲಿಸಿಕೊಂಡಿದೆಯೆಂಬುದರಲ್ಲಿ ಯಾವುದೇ ಸಂಶಯವಿರುವುದಿಲ್ಲ. ಸಾಮಾನ್ಯವಾಗಿ, ಅಂಥ ಸಾಕ್ಷ್ಯಗಳ ಸಾಕ್ಷಿಯನ್ನು ವಸ್ತುನಿಷ್ಠವಾಗಿ ಪರಿಶೀಲಿಸಬೇಕಾದ ಅವಶ್ಯಕತೆಯಿದ್ದು ಇದರಿಂದಾಗಿ, ಎಲ್ಲಾ ಎಚ್ಚರಿಕೆ ಹಾಗೂ ಜಾಗರೂಕತೆಗಳಿಂದ ಇದನ್ನು ನೋಡಬೇಕಾಗಿರುತ್ತದೆ. ಪ್ರಾ.ಸಾ. 3 ಮತ್ತು 5 ರವರುಗಳು ಸ್ವತಂತ್ರವಾದ ಪ್ರತ್ಯಕ್ಷ ಸಾಕ್ಷೀದಾರರಾಗಿರುತ್ತಾರೆ. ಅವರು ಅಪರಾಧದ ಘಟನೆ ನಡೆದ ಸ್ಥಳದ ಬಳಿಯಲ್ಲಿ ತಮ್ಮ ವ್ಯಾಪಾರ ಸಂಸ್ಥೆಗಳನ್ನು ಹೊಂದಿದವರಾಗಿರುತ್ತಾರೆ. ಅವರುಗಳು ಮೃತ ವ್ಯಕ್ತಿಯ ಸಮುದಾಯದವರಾಗಲೀ ಅಥವಾ ಆಪಾದಿತ ವ್ಯಕ್ತಿಗಳ ಸಮುದಾಯದವರಾಗಲೀ ಆಗಿರುವುದಿಲ್ಲ. ಅವರು ಪ್ರಾಸಿಕ್ಯೂಷನ್ ಪ್ರಕರಣದಲ್ಲಿ ತಾವು ಹಿತಾಸಕ್ತಿ ಹೊಂದಿದವರೆಂದು ತೋರಿಸಲು ಪ್ರತಿವಾದಿಗಳ ಮೂಲಕ ಯಾವುದೇ ಸಲಹೆಯನ್ನು ನೀಡಿರುವುದಿಲ್ಲ. ಘಟನೆ ನಡೆದ ಸ್ಥಳದ ಬಳಿಯಲ್ಲಿಯೇ ಅವರುಗಳ ಅಂಗಡಿ ಮತ್ತು ರೆಸ್ಟೋರೆಂಟ್ ಇದ್ದ ಕಾರಣ ಅವರ ಹಾಜರಿಯ ಬಗ್ಗೆ ಯಾವುದೇ ಸಂಶಯ ಬರಲು ಸಾಧ್ಯವಾಗಿರುವುದಿಲ್ಲ. ಈ ಸಾಕ್ಷಿಗಳ ಸಾಕ್ಷ್ಯದಲ್ಲಿ ಕೆಲವು ವ್ಯತ್ಯಾಸಗಳಿರುತ್ತವೆ. ಆದರೆ, ಅಂಥ ವ್ಯತ್ಯಾಸಗಳು, ದಾಖಲೆಯಲ್ಲಿ ಇರುವ ಸಾಕ್ಷ್ಯವನ್ನು ದಕ್ಕೆಗೊಳಿಸುವುದಿಲ್ಲ. ***'ಪ್ರೇಮ್ ನರೇನ್ ಮತ್ತು ಮತ್ತೊಬ್ಬರು –ವಿರುದ್ಧ– ಮಧ್ಯ ಪ್ರದೇಶ ರಾಜ್ಯ*** [1]', ಪ್ರಕರಣದಲ್ಲಿ ಸನ್ಮಾನ್ಯ ಸರ್ವೋಚ್ಛ ನ್ಯಾಯಾಲಯದ ತೀರ್ಪನ್ನು ಉದಾಹರಿಸಿ, ಪ್ರತಿವಾದಿ ವಕೀಲರು, ಪ್ರಾ.ಸ. 3 ಮತ್ತು 5ರ ಸಾಕ್ಷ್ಯಗಳನ್ನು ಘಟನೆ ನಡೆದ 40 ದಿನಗಳ ತರುವಾಯ ಅವರ ಹೇಳಿಕೆಗಳನ್ನು ದಾಖಲಿಸಿರುವ ಕಾರಣ ಅವುಗಳನ್ನು ಬಿಟ್ಟುಬಿಡುವ ಅವಶ್ಯಕತೆಯಿದೆಯೆಂದು ವಾದಿಸಿರುತ್ತಾರೆ. ನಾವು ಈಗಾಗಲೇ ಮೇಲೆ ಉದಾಹರಿಸಿದಂತೆ, ಘಟನೆ ನಡೆದ ಸುಮಾರು ಆರು ವಾರಗಳ ತರುವಾಯ ಅವರನ್ನು ತನಿಖೆ ಮಾಡಲು ಯಾವುದೇ ಕಾರಣಗಳು ಇರುವುದಿಲ್ಲ. ಆದರೆ, ಪ್ರಸ್ತುತ ಘಟನೆಯಲ್ಲಿ, ಈ ಸಾಕ್ಷ್ಯಗಳಿಗೆ ಯಾವುದೇ ಸಮೂಹಗಳ ಬಗ್ಗೆ ಯಾವುದೇ

1. 2007 (15) ಎಸ್‌ಸಿಸಿ 485

ಹಿತಾಸಕ್ತಿಯಾಗಲೀ ಅಥವಾ ನಿರಾಸಕ್ತಿಯಾಗಲೀ ಇರುವುದಿಲ್ಲ. ಅವರು ಪಾಟೀಸವಾಲಿನಲ್ಲಿ ಎಲ್ಲಾ ಸಾಕ್ಷ್ಯದ ವಿವರಗಳನ್ನು ಸಾವಧಾನವಾಗಿ ನಿಭಾಯಿಸಿರುತ್ತಾರೆ. ***ರಮೇಶ್ ಬಿನ್ ಲಕ್ಷ್ಮಣ್ ಗೌಲಿ -ವಿರುದ್ಧ- ಮಧ್ಯ ಪ್ರದೇಶ ರಾಜ್ಯ ಮತ್ತು ಇತರರು*** [2], ಪ್ರಕರಣದಲ್ಲಿ ಸರ್ವೋಚ್ಛ ನ್ಯಾಯಾಲಯವು ಅಭಿಪ್ರಾಯಪಟ್ಟಿರುವಂತೆ, ಕ್ರಿಮಿನಲ್ ಪ್ರಕ್ರಿಯಾ ಸಂಹಿತೆಯ 161ನೇ ಪ್ರಕರಣದಡಿಯಲ್ಲಿ ಸ್ವತಃ ಪೊಲೀಸರು ಸಾಕ್ಷ್ಯವನ್ನು ತನಿಖೆ ಮಾಡುವಲ್ಲಿ ಆಗುವ ವಿಳಂಬವು ಸಾಕ್ಷ್ಯವನ್ನು ನಿರಾಕರಿಸಲು ಆಧಾರವಾಗುವುದಿಲ್ಲವಾದುದರಿಂದ, ಸಾಕ್ಷ್ಯದ ಪಾಟೀ ಸವಾಲಿನಲ್ಲಿ, ಯಾವುದೇ ಮೂರ್ತತೆಯನ್ನು, ಅದರ ಸಾಕ್ಷ್ಯವನ್ನು ಪ್ರಶ್ನಿಸಲು ತರಲಾಗಿರುವುದಿಲ್ಲ. ಪ್ರಾ.ಸಾ. 3 ಮತ್ತು 5ರ ಸಾಕ್ಷ್ಯವು ಸುಸಂಗತವಾದ, ತರ್ಕಬದ್ಧವಾದ ಹಾಗೂ ವಿಶ್ವಾಸನೀಯವಾದವುಗಳು ಆಗಿರುತ್ತವೆಂದು ನಾವು ಕಂಡುಕೊಂಡಿರುತ್ತೇವೆ. ಅವರ ಸಾಕ್ಷ್ಯವನ್ನು ತ್ಯಜಿಸಿಬಿಡುವ ಮಟ್ಟಿಗೆ ಪಾಟೀ ಸವಾಲಿನಲ್ಲಿ ಪ್ರತಿವಾದಿ ವಕೀಲರು ಏನನ್ನು ಹೊರಹೊಮ್ಮಿಸಲಾಗಿರುವುದಿಲ್ಲ. ಮುಂದುವರೆದು, ಪ್ರಾ.ಸಾ. 3 ಮತ್ತು 5ರ ಸಾಕ್ಷ್ಯವನ್ನು ನಿರ್ಲಕ್ಷಿಸಿದ್ದಾಗ್ಯೂ, ಪ್ರಾಸಿಕ್ಯೂಷನ್ ಪ್ರಾ.ಸಾ. 1ರ ಸಾಕ್ಷ್ಯದ ಮೂಲಕ ತನ್ನ ವಾದವನ್ನು ರುಜುವಾತುಪಡಿಸಿರುತ್ತದೆಂದು ನಾವು ಹೇಳಬಹುದಾಗಿರುತ್ತದೆ.

12. ಮೇಲೆ ನಮೂದಿಸಿದಂತೆ, ಪ್ರಾ.ಸಾ. 1, ಮೃತ ವ್ಯಕ್ತಿಯೊಂದಿಗೆ ಆತನ ಮೋಟಾರು ಸೈಕಲಿನಲ್ಲಿ ಬಂದಿರುತ್ತಾಳೆ. ಆ ಘಟನೆ ನಡೆದಾಗ ಆಕೆ ಅಲ್ಲಿಯೇ ಇರುತ್ತಾಳೆ. ಆಕೆ ಆ ಸಮಯದಲ್ಲಿ ಕಾಲೇಜಿಗೆ ಹೋಗುತ್ತಿರುತ್ತಾಳೆ. ಪ್ರಾ.ಸಾ. 1 ಘಟನೆಯನ್ನು ಕುರಿತಂತೆ ಆರಂಭದಿಂದ ಕೊನೆಯತನಕ ಸಾಕ್ಷ್ಯ ನೀಡಿರುತ್ತಾಳೆ. ನ್ಯಾಯಾಲಯದ ಎದುರು ಆಕೆಯ ಹೇಳಿಕೆಯು ತಿರುಚದೆ ಹಾಗೆಯೇ ಉಳಿದಿರುತ್ತದೆ. ಈಕೆ ತುಂಬಾ ದೀರ್ಘವಾದ ಪಾಟೀ ಸವಾಲಿಗೆ ಒಳಗಾಗಿದ್ದರೂ ಬೇರೆ ಏನನ್ನೂ ಈಕೆಯಿಂದ ಹೊರಹೊಮ್ಮಿಸಲಾಗಿರುವುದಿಲ್ಲ. ಪ್ರಾ.ಸಾ. 1 ರ ಸಾಕ್ಷ್ಯವನ್ನು ಗಮನಿಸಿದಾಗ, ನ್ಯಾಯಾಲಯದ ಮುಂದೆ ಆಕೆ ಹೇಳಿರುವ ಹೇಳಿಕೆಯು ಸಂಪೂರ್ಣವಾಗಿ ಸಹಜವಾಗಿಯೇ ಇದೆ ಎಂಬುದು ನಮ್ಮ ಸ್ಪಷ್ಟ ಅಭಿಪ್ರಾಯವಾಗಿರುತ್ತದೆ. ನ್ಯಾಯಾಲಯದ ಎದುರು ಆಕೆ ಹೇಳಿರುವ ಸಾಕ್ಷ್ಯದಲ್ಲಿ

2. (2000) 1 ಎಸ್‌ಸಿಸಿ 243

ಯಾವುದೇ ಕೃತಕತೆ ನಮಗೆ ಕಂಡುಬಂದಿರುವುದಿಲ್ಲ. ಈಕೆ ಕೇವಲ ಸುಮಾರು 19 ರಿಂದ 20ರ ವಯೋಮಾನದವಳಾಗಿರುವುದರಿಂದ ಹಾಗೂ ಭದ್ರಾವತಿ ಪಟ್ಟಣದ ಮುಖ್ಯ ರಸ್ತೆಯ ಮೇಲೆ ತನ್ನ ತಂದೆಯ ಭೀಕರವಾದ ಕೊಲೆಯ ಘಟನೆಯನ್ನು ನೋಡಿದ ಕಾರಣ, ಈಕೆ ತುಂಬಾ ಹೆದರಿ, ಭಯಭೀತಳಾಗಿರುತ್ತಾಳೆ. ಇಡೀ ಘಟನೆಯು, ಆ ಸ್ಥಳದಲ್ಲಿ ಕೇವಲ ಐದೇ ಐದು ನಿಮಿಷದಲ್ಲಿ ನಡೆದುಹೋಗಿರುತ್ತದೆ. ಪ್ರಾ.ಸಾ.22 ಮತ್ತು ಪ್ರಾ.ಸಾ. 6 ರನ್ನು ಒಳಗೊಂಡಂತೆ ದಾರಿಹೋಕರೂ ಆಕೆಯ ತಂದೆಯ ಪ್ರಾಣವನ್ನು ಉಳಿಸಲು ಮುಂದೆ ಬರಲಿಲ್ಲವೆಂದು ಆಕೆ ಸ್ಪಷ್ಟಪಡಿಸಿರುತ್ತಾಳೆ. ಆಕೆಗೆ ಆ ಕ್ಷಣದಲ್ಲಿ ಏನು ಮಾಡಬೇಕೆಂದು ತೋಚದೆ ದಿಙ್ಮೂಢ ಸ್ಥಿತಿಯಲ್ಲಿದ್ದಾಗ, ಅಲ್ಲಿನ ಸಾರ್ವಜನಿಕರು ಒಂದು ಆಟೋ ರಿಕ್ಷಾದ ಮೂಲಕ ಆಕೆಯನ್ನು ಮನೆಗೆ ಕಳುಹಿಸಿರುತ್ತಾರೆ. ಆಕೆ ಮನೆಗೆ ಹೋಗಿ ಕುಟುಂಬದ ಸದಸ್ಯರಿಗೆ ಘಟನೆಯ ಬಗ್ಗೆ ತಿಳಿಸಿರುತ್ತಾಳೆ. ಈಕೆ ಪೊಲೀಸ್ ಠಾಣೆಗೆ ಬಂದು ನಿಶಾನೆ ಪಿ.1ರ ಪ್ರಕಾರ ದೂರನ್ನು ದಾಖಲಿಸಿರುತ್ತಾಳೆ. ಆಕೆ ಪಾಟೀ ಸವಾಲಿನಲ್ಲಿ ಉತ್ತರಿಸಿರುವ ರೀತಿಯು, ಸಾಕ್ಷ್ಯವು ಸಂಪೂರ್ಣವಾಗಿ ವಿಶ್ವಾಸನೀಯವಾದವುಗಳೆಂಬುದನ್ನು ರುಜುವಾತುಪಡಿಸುತ್ತದೆ. ಈಕೆ ಸಾಮಾನ್ಯವಾಗಿ ಬಸ್ಸು ಮತ್ತು ಸೈಕಲುಗಳಿಂದ ಕಾಲೇಜಿಗೆ ಹೋಗುತ್ತಿದ್ದು, ಕೇವಲ ಆ ದಿನದಂದು ಮಾತ್ರವೇ ತನ್ನ ತಂದೆಯ ಮೋಟಾರು ಸೈಕಲ್‌ನಲ್ಲಿ ಕಾಲೇಜಿಗೆ ಹೋಗುತ್ತಿದ್ದಳೆಂದು, ಸಾಕ್ಷ್ಯ ನೀಡಿರುವುದನ್ನು ಅಷ್ಟು ಮಾತ್ರಕ್ಕೆ ನಂಬಲು ಸಾಧ್ಯವಾಗುತ್ತಿರಲಿಲ್ಲ. ಕಾಲೇಜಿಗೆ ಹೋಗುವುದು ತಡವಾದಾಗಲೆಲ್ಲಾ, ಸಾಮಾನ್ಯವಾಗಿ ಆಕೆಯ ತಂದೆಯೇ ಕಾಲೇಜಿಗೆ ಬಿಡುತ್ತಿದ್ದುದಾಗಿ ಆಕೆ ನಿರ್ದಿಷ್ಟವಾಗಿ ಸಾಕ್ಷ್ಯ ನೀಡಿರುತ್ತಾಳೆ. ಆ ದಿನ ಕೂಡ ಕಾಲೇಜಿಗೆ ಹೋಗಲು ತಡವಾಗಿತ್ತು. ಕಾಲೇಜಿನಲ್ಲಿ ಮೊದಲ ಪಿರಿಯಡ್ ಬೆಳಿಗ್ಗೆ 10.00 ಗಂಟೆಗೆ ಆರಂಭವಾಗಲಿದ್ದು, ಅಂದು ತಡವಾದ ಕಾರಣ, ಆಕೆ ತನ್ನ ತಂದೆಯನ್ನು ಕಾಲೇಜಿನವರೆಗೂ ತನ್ನನ್ನು ಬಿಡಲು ಕೇಳಿಕೊಂಡಿರುತ್ತಾಳೆ. ದುರಾದೃಷ್ಟವಶಾತ್, ಮಾರ್ಗಮಧ್ಯೆ ಈ ಘಟನೆ ಸಂಭವಿಸಿರುತ್ತದೆ.

13. ಮೇಲೆ ನಮೂದಿಸಿದಂತೆ, ಪ್ರಾ.ಸಾ. 3 ಮತ್ತು 5 ರ ಸಾಕ್ಷ್ಯವನ್ನು ಉಪೇಕ್ಷಿಸಿದ್ದಾಗ್ಯೂ, ಪ್ರಾ.ಸಾ. 1ರ ಸಾಕ್ಷ್ಯವನ್ನು ಘಟನೆಯ ಏಕೈಕ ಪ್ರತ್ಯಕ್ಷ ಸಾಕ್ಷಿ ಎಂದು ಪರಿಗಣಿಸಿ, ಅಧಿವಿಚಾರಣಾ ನ್ಯಾಯಾಲಯವು ಸರಿಯಾದ ತೀರ್ಮಾನವನ್ನೇ

ತೆಗೆದುಕೊಂಡಿದೆ ಎಂದು ನಾವು ಪರಿಗಣಿಸುತ್ತೇವೆ. ಏಕೈಕ ಸಾಕ್ಷಿಯ ಸಾಕ್ಷ್ಯವನ್ನು ಒಪ್ಪತಕ್ಕದ್ದಲ್ಲವೆಂದು ಹಾಗೂ ಅದು ನಂಬಲರ್ಹವಾಗಿದ್ದಾಗ್ಯೂ ಅಂಥ ಸಾಕ್ಷ್ಯದ ಮೇಲೆ ಅಪರಾಧ ನಿರ್ಣಯವು ಅವಲಂಬಿಸಬಾರದೆಂದು ಯಾವ ನಿಯಮ ಅಥವಾ ಕಾನೂನು ಇರುವುದಿಲ್ಲವೆಂಬುದು ಸ್ಪಷ್ಟವಾಗಿರುತ್ತದೆ. ಏಕೈಕ ಸಾಕ್ಷಿಯ ಸಾಕ್ಷ್ಯವು ನೇರವಾಗಿ, ಪೂರಕವಾಗಿ, ನಂಬಲರ್ಹವಾಗಿದ್ದಲ್ಲಿ, ಪ್ರಾಸಿಕ್ಯೂಷನ್‌ನ ಪ್ರಕರಣದ ವಾದವನ್ನು ರುಜುವಾತುಪಡಿಸಲು ಸಾಕಷ್ಟಾಗಿರುತ್ತದೆ. ಅಪರಾಧ ನಿರ್ಣಯವು ಅಂಥ ಏಕೈಕ ಸಾಕ್ಷಿಯ ಸಾಕ್ಷ್ಯದ ಮೇಲೆ ಅವಲಂಬಿಸಿರುತ್ತದೆ. ವಿಧಿವತ್ತಾಗಿ ರುಜುವಾತುಪಡಿಸದ ಹೊರತು ಏಕೈಕ ಸಾಕ್ಷಿಯ ಸಾಕ್ಷ್ಯದ ಮೇಲೆ ಅಪರಾಧ ನಿರ್ಣಯವನ್ನು ಮಾಡಬಾರದೆಂಬ ಯಾವುದೇ ಶಾಸನಾತ್ಮಕ ಅಗತ್ಯತೆ ಇರುವುದಿಲ್ಲ. ನ್ಯಾಯಾಲಯವು ವಿಧಿವತ್ತಾಗಿ ರುಜುವಾತುಪಡಿಸುವಂಥ ಏಕೈಕ ಸಾಕ್ಷಿಯ ಸಾಕ್ಷ್ಯವನ್ನು ಒಪ್ಪಿಕೊಳ್ಳಬಹುದು ಮತ್ತು ಏಕೈಕ ಸಾಕ್ಷಿಯ ಸಾಕ್ಷ್ಯದ ಸ್ವರೂಪವು ಅಸ್ಪಷ್ಟವಾಗಿರುವ ಪ್ರಕರಣಗಳನ್ನು ಹೊರತುಪಡಿಸಿ ಆಪಾದಿತರ ಅಪರಾಧವನ್ನು ನಿರ್ಣಯಿಸಬಹುದು. ವಿವೇಕದ, ವಿಧಿವತ್ತಾಗಿ ರುಜುವಾತು ಪಡಿಸುವಂಥ ಸಂದರ್ಭದಲ್ಲಿ, ಬಾಲ ಸಾಕ್ಷ್ಯ, ಸಹಾಪರಾಧಿ ಅಥವಾ ಇಂತಹುದೇ ಸ್ವಭಾವದ ಯಾರೇ ಇತರರ ಪ್ರಕರಣದಲ್ಲಿರುವಂತೆ ಆಗ್ರಹಪಡಿಸಬಹುದಾಗಿರುತ್ತದೆ. ಪ್ರಸ್ತುತ ಪ್ರಕರಣದಲ್ಲಿ ಪ್ರಾ.ಸಾ. 1 ಬಾಲ ಸಾಕ್ಷ್ಯವಾಗಲೀ ಅಥವಾ ಸಹಾಪರಾಧಿಯಾಗಲೀ ಆಗಿರುವುದಿಲ್ಲ. ಘಟನೆ ನಡೆದ ಸ್ಥಳದಲ್ಲಿ ಆಕೆಯಿದ್ದದ್ದು ಅತ್ಯಂತ ಸ್ವಾಭಾವಿಕವಾಗಿರುತ್ತದೆ. ಪ್ರಾ.ಸಾ. 22 ಪ್ರಾಸಿಕ್ಯೂಷನ್‌ನ ವಾದಕ್ಕೆ ಪ್ರತಿಕೂಲವಾಗಿ ಸಾಕ್ಷ್ಯ ನೀಡಿದ್ದಾಗ್ಯೂ ಮೃತ ವ್ಯಕ್ತಿ ತನ್ನ ಮಗಳೊಂದಿಗೆ (ಪ್ರಾ.ಸಾ. 1) ಮೋಟಾರು ಸೈಕಲಿನ ಮೇಲೆ ಬರುವುದನ್ನು ತಾನು ನೋಡಿದೆ ಎಂದು ನ್ಯಾಯಾಲಯದ ಮುಂದೆ ಸಾಕ್ಷ್ಯ ನೀಡಿರುತ್ತಾನೆ. ಹಾಗಾಗಿ, ಪ್ರತಿಕೂಲ ಸಾಕ್ಷ್ಯವೂ ಕೂಡ ಪ್ರಾ.ಸಾ. 1 ಘಟನೆ ನಡೆದ ಸ್ಥಳದಲ್ಲಿ ಇದ್ದಳೆಂಬುದನ್ನು ಸ್ಪಷ್ಟಪಡಿಸುತ್ತದೆ. ಇದಲ್ಲದೆ, ಪ್ರಾ.ಸಾ. 1 ರ ಸಾಕ್ಷ್ಯವು ವೈದ್ಯಕೀಯ ಸಾಕ್ಷ್ಯದ ಹಾಗೂ ಅಪರಾಧ ನಡೆದುದಕ್ಕೆ ಸಂಬಂಧಿಸಿದ ಉದ್ದೇಶಕ್ಕೆ ಸಂಬಂಧಿಸಿದ ಸಾಕ್ಷ್ಯದ ಮೂಲಕ ವಿಧಿವತ್ತಾಗಿ ರುಜುವಾತು ಪಡಿಸುತ್ತದೆ.

14. ಪ್ರತ್ಯಕ್ಷ ಸಾಕ್ಷಿಗಳ ಸಾಕ್ಷ್ಯಗಳಲ್ಲಿ ವ್ಯತ್ಯಾಸವಿದೆಯೆಂದು ವಾದಿಸಲು ಪ್ರತಿವಾದಿ ವಕೀಲರು ಕೋರಿರುತ್ತಾರೆ. ಮೊದಲನೆಯದಾಗಿ, ನಾವು, ಪ್ರಾ.ಸಾ. 1 ರ ಸಾಕ್ಷ್ಯವು

ಫಿರ್ಯಾದಿನ (ನಿಶಾನೆ ಪಿ.1)ರ ಪ್ರಕಾರ ಪ್ರಾಸಿಕ್ಯೂಷನ್‌ನ ವಾದವನ್ನು ಸಂಪೂರ್ಣವಾಗಿ ಬೆಂಬಲಿಸುತ್ತದೆಂಬುದನ್ನು ಸ್ಪಷ್ಟಪಡಿಸಿಕೊಳ್ಳಬೇಕು. ಅದರಲ್ಲಿ ಯಾವುದೇ ವ್ಯತ್ಯಾಸವಿರುವುದಿಲ್ಲ. ಆಪಾದಿತರ ಹೆಸರುಗಳನ್ನು ನಮೂದಿಸಲಾದ ಪ್ರಥಮ ಮಾಹಿತಿ ವರದಿಯ ಹಂತದಿಂದಲೂ ಪ್ರಾ.ಸಾ. 1ರ ಪಾಟೀಸವಾಲಿನ ಸಮಯದಲ್ಲಿ ಪ್ರತಿವಾದಿಗಳು ದಾಖಲೆಯ ಮೇಲೆ ಯಾವುದೇ ಪ್ರತಿಕೂಲ ಹೇಳಿಕೆಗಳನ್ನಾಗಲೀ ಅಥವಾ ಯಾವುದೇ ಇತರ ನಿರಸನಗಳನ್ನಾಗಲೀ ತರಲಾಗಿರುವುದಿಲ್ಲ. ಪ್ರಾ.ಸಾ. 1ರ ಸಾಕ್ಷ್ಯದಲ್ಲಿ, ಆಪಾದಿತರು, ಸಂಪೂರ್ಣ ಶಸ್ತ್ರಧಾರಿಗಳಾಗಿ ಘಟನೆಯ ಸ್ಥಳಕ್ಕೆ ಬಂದಿರುತ್ತಾರೆಂದು ಹೇಳಿರುತ್ತಾಳೆ. ಪ್ರತಿಯೊಬ್ಬ ಆಪಾದಿತನು ಎಸಗಿದ ಕಣ್ಣಿಗೆ ಗೋಚರಿಸಿದ ಪ್ರತಿಯೊಂದು ಕೃತ್ಯವನ್ನು ವಿವರವಾಗಿ ಆಪಾದಿತರ ಬಗ್ಗೆ ಹೇಳಿರುತ್ತಾಳೆ. ಹಲವಾರು ವ್ಯಕ್ತಿಗಳು ಕೃತ್ಯದಲ್ಲಿ ಪಾಲ್ಗೊಂಡಾಗ, ಪ್ರತಿಯೊಬ್ಬ ವ್ಯಕ್ತಿಯೂ ಇಂಥದೇ ಕೃತ್ಯ ಎಸಗಿರುತ್ತಾನೆಂದು ನಿರ್ದಿಷ್ಟವಾಗಿ ಹೇಳುವುದು ಸಾಧ್ಯವಾಗಿರುವುದಿಲ್ಲ. ಆಪಾದಿತರು ಸಾಮೂಹಿಕವಾಗಿ ಮಾರಕಾಸ್ತ್ರಗಳೊಂದಿಗೆ ಶಸ್ತ್ರಸಜ್ಜಿತರಾಗಿ, ಮೃತ ವ್ಯಕ್ತಿಯನ್ನು ಕೊಲೆ ಮಾಡುವ ಒಂದೇ ಉದ್ದೇಶದಿಂದ ಘಟನೆ ನಡೆದ ಸ್ಥಳಕ್ಕೆ ಆಗಮಿಸಿರುತ್ತಾರೆಂಬುದು ವಾಸ್ತವಾಂಶಗಳು ಹಾಗೂ ಸಂದರ್ಭಗಳು ಹಾಗೂ ಸಾಕ್ಷ್ಯದಿಂದ ಸ್ಪಷ್ಟವಾಗಿರುತ್ತದೆ. ಅವರು ಮೃತ ವ್ಯಕ್ತಿಯ ಮೇಲೆ ದಾಳಿ ಮಾಡಿ, ಕೊಲೆ ಮಾಡಲು ಕಾನೂನುಬಾಹಿರವಾಗಿ ಒಗ್ಗೂಡಿರುತ್ತಾರೆ.

15. ಘಟನೆ ನಡೆದ ಸ್ಥಳದಲ್ಲಿ ಪ್ರಾ.ಸಾ.1 ಇವಳ ನಡತೆಯು ಕೃತಕವಾಗಿತ್ತೆಂಬ ಪ್ರತಿವಾದಿ ವಕೀಲರ ವಾದವನ್ನು ಒಪ್ಪಿಕೊಳ್ಳಲು ಸಾಧ್ಯವಾಗುವುದಿಲ್ಲ. ಕೊಲೆಗೆ ಸಾಕ್ಷಿಯಾಗುವಂಥ ಪ್ರತಿಯೊಬ್ಬ ವ್ಯಕ್ತಿಯು ತನ್ನದೇ ರೀತಿಯಲ್ಲಿ ಪ್ರತಿಕ್ರಿಯಿಸುತ್ತಾನೆ. ಕೆಲವರು ದಿಗ್ಮೂಢರಾಗಿ ಮಾತು ಕಳೆದುಕೊಂಡು, ಸ್ಥಳದಲ್ಲಿಯೇ ಸುಸ್ತಾಗಿ ಕುಸಿಯುತ್ತಾರೆ. ಕೆಲವರು ಭಾವೋದ್ವೇಗಕ್ಕೆ ಒಳಗಾಗಿ ಗೋಳಾಡಲು ಆರಂಭಿಸುತ್ತಾರೆ, ಕೆಲವರು ಸಹಾಯಕ್ಕಾಗಿ ಜೋರಾಗಿ ಚೀರುತ್ತಾರೆ. ಇನ್ನೂ ಕೆಲವರು ತಮ್ಮನ್ನು ತಾವು ರಕ್ಷಿಸಿಕೊಳ್ಳಲು ಆ ಸ್ಥಳದಿಂದ ಸಾಧ್ಯವಾದಷ್ಟು ದೂರ ಓಡಿಹೋಗುತ್ತಾರೆ. ಇನ್ನೂ ಕೆಲವರು ಹಲ್ಲೆ ಮಾಡುತ್ತಿರುವವರ ವಿರುದ್ಧ ಪ್ರತಿ ದಾಳಿ ಮಾಡುವ

ಹಂತಕ್ಕೂ ಹೋಗಿ ಗಾಯಾಳುವನ್ನು ಕಾಪಾಡಲು ಪ್ರಯತ್ನಿಸುತ್ತಾರೆ. ಪ್ರತಿಯೊಬ್ಬರೂ ತಮ್ಮದೇ ವಿಶಿಷ್ಟ ರೀತಿಯಲ್ಲಿ ಪ್ರತಿಕ್ರಿಯಿಸುತ್ತಾರೆ. ಸಹಜ ಪ್ರತಿಕ್ರಿಯೆಯೆಂಬ ಹೇಳಿಮಾಡಿಸಿದ ಯಾವುದೇ ನಿಯಮ ಇರುವುದಿಲ್ಲ. ಸಾಕ್ಷೀದಾರರು ಯಾವುದೇ ನಿರ್ದಿಷ್ಟ ರೀತಿಯಲ್ಲಿ ಪ್ರತಿಕ್ರಿಯಿಸಿಲ್ಲವೆಂಬ ಕಾರಣಕ್ಕೆ ಆ ಸಾಕ್ಷಿಯನ್ನು ತ್ಯಜಿಸುವುದು ಸಂಪೂರ್ಣವಾಗಿ ಅವಾಸ್ತವಿಕವಾದುದು ಹಾಗೂ ಅನೂಹ್ಯವಾದುದು ಆಗಿರುತ್ತದೆ.

16. ಮೇಲೆ ಹೇಳಿದಂತೆ, ಪ್ರಾ.ಸಾ. 3 ಮತ್ತು 5ರ ಸಾಕ್ಷ್ಯಗಳು ಪ್ರಾಸಿಕ್ಯೂಷನ್‌ನ ವಾದವನ್ನು ಸಂಪೂರ್ಣವಾಗಿ ಬೆಂಬಲಿಸಿದ್ದಾಗ್ಯೂ, ಅವರ ಸಾಕ್ಷ್ಯವನ್ನು ನಾವು ಉದಾಹರಿಸಿರುವುದಿಲ್ಲವೆಂದು ನಾವು ಸ್ಪಷ್ಟಪಡಿಸಿರುತ್ತೇವೆ. ಅಲ್ಲದೆ, ಪ್ರಾ.ಸಾ. 3 ಮತ್ತು 5 ರ ಸಾಕ್ಷ್ಯವನ್ನು ಅಲಕ್ಷಿಸಿದ್ದಾಗ್ಯೂ, ಪ್ರಾಸಿಕ್ಯೂಷನ್ ಪ್ರಾ.ಸಾ. 1ರ ಸಾಕ್ಷ್ಯ, ವೈದ್ಯಕೀಯ ಸಾಕ್ಷ್ಯ ಮತ್ತು ದಾಖಲೆ ಮೇಲಿನ ಇತರೆ ಸಾಕ್ಷಿಗಳ ಮೂಲಕ ಅದರ ಸಮಗ್ರತೆಯಲ್ಲಿ ತನ್ನ ವಾದವನ್ನು ರುಜುವಾತುಪಡಿಸಿಕೊಳ್ಳಲು ಸಮರ್ಥವಾಗಿರುತ್ತದೆಂದೂ ಸಹ ಸ್ಪಷ್ಟಪಡಿಸಿರುತ್ತೇವೆ. ಮುಂದುವರೆದು, ಕಾನೂನಿನ ನಿಲುವನ್ನು ಪ್ರಾ.ಸಾ. 3 ಮತ್ತು ಪ್ರಾ.ಸಾ.5ರ ಸಂಬಂಧದಲ್ಲಿ ಸ್ಪಷ್ಟಪಡಿಸಿಕೊಳ್ಳುವ ಸಲುವಾಗಿ ಕ್ರಿಮಿನಲ್ ಪ್ರಕ್ರಿಯಾ ಸಂಹಿತೆಯ 161ನೇ ಪ್ರಕರಣದಡಿಯಲ್ಲಿ ತನಿಖೆಯ ಸಮಯದಲ್ಲಿ ತನಿಖಾಧಿಕಾರಿಗಳು, ಸಾಕ್ಷೀದಾರರ ಹೇಳಿಕೆಗಳನ್ನು ತುಂಬಾ ತಡವಾಗಿ ದಾಖಲಿಸಿಕೊಂಡಿರುತ್ತಾರೆಂಬ ಒಂದೇ ಕಾರಣಕ್ಕೆ, ಅವರ ಸಾಕ್ಷ್ಯವನ್ನು, ಅವರು ಪಾಟೀಸವಾಲಿನಲ್ಲಿ ಎದುರಿಸಿರುವಲ್ಲಿ ಹಾಗೂ ದಾಖಲೆಯಾಗಿರುವ ಇತರೆ ಸಾಕ್ಷ್ಯದ ಮೂಲಕ ಇವರ ಸಾಕ್ಷ್ಯವು ಅನ್ಯಥಾ ನಂಬಲರ್ಹವಾಗಿದ್ದಲ್ಲಿ ತಿರಸ್ಕರಿಸಲಾಗುವುದಿಲ್ಲ. ಮೇಲೆ ನಾವು ಈಗಾಗಲೇ ಹೇಳಲಾದಂತೆ, ಪ್ರತಿಯೊಬ್ಬ ವ್ಯಕ್ತಿಯು ತನ್ನದೇ ಆದ ವಿಶಿಷ್ಟ ರೀತಿಯಲ್ಲಿ ಪ್ರತಿಕ್ರಿಯಿಸುತ್ತಾನೆ. ಪ್ರತ್ಯಕ್ಷ ಸಾಕ್ಷಿಗಳಾಗಿರುವ ಪ್ರಾ.ಸಾ. 3 ಮತ್ತು 5 ರವರುಗಳು ತಮ್ಮನ್ನು ತಾವು ಉಳಿಸಿಕೊಳ್ಳಲು ಬಾಯಿಮುಚ್ಚಿಕೊಂಡಿರುತ್ತಾರೆ. ಹಾಗಿಲ್ಲದಿದ್ದಲ್ಲಿ, ಅವರನ್ನು ಆಕಸ್ಮಿಕ ಸಾಕ್ಷಿದಾರರೆಂದು ಪರಿಗಣಿಸುವಂತಿರಲಿಲ್ಲ. ಸ್ವತಂತ್ರ ಸಾಕ್ಷೀದಾರರನ್ನು 'ಆಕಸ್ಮಿಕ ಸಾಕ್ಷೀದಾರ'ರೆಂದು ವಿವರಿಸುವ ಮೂಲಕ ಅದು ಕೊಲೆಯ ಅಧಿವಿಚಾರಣೆಯಲ್ಲಿ, ಅವರ ಸಾಕ್ಷ್ಯವು ಅನುಮಾನಾಸ್ಪದವಾಗಿದೆ ಹಾಗೂ ಅವರ ಉಪಸ್ಥಿತಿ ಸಂದೇಹಾಸ್ಪದವಾಗಿತ್ತೆಂಬ

ಅರ್ಥವನ್ನು ಸೂಚಿಸುವುದಿಲ್ಲ. ಕೊಲೆಗಳನ್ನು ಸಾಕ್ಷಿದಾರರಿಗೆ ಮೊದಲೇ ತಿಳಿಸಿ ಅಥವಾ ಅವರ ಹಾಜರಿ ಕೋರಿ ಮಾಡುವಂಥವಲ್ಲ. ವೇಶ್ಯಾಗೃಹದಲ್ಲಿ ಕೊಲೆ ಸಂಭವಿಸಿದಲ್ಲಿ, ವೇಶ್ಯೆಯರು ಹಾಗೂ ವಿಟರು ಸ್ವಾಭಾವಿಕ ಸಾಕ್ಷೀದಾರರಾಗಿರುತ್ತಾರೆ. ರಸ್ತೆಯಲ್ಲಿ ಕೊಲೆ ಸಂಭವಿಸಿದರೆ, ಕೇವಲ ದಾರಿಹೋಕರಷ್ಟೇ ಸಾಕ್ಷೀದಾರರಾಗುತ್ತಾರೆ. ಅವರ ಸಾಕ್ಷ್ಯವನ್ನು, ಅವು ಕೇವಲ 'ಆಕಸ್ಮಿಕ ಸಾಕ್ಷಿ'ಗಳೆಂಬ ಕಾರಣಕ್ಕೆ ಅನುಮಾನಾಸ್ಪದವಾಗಿ ತಳ್ಳಿಹಾಕಲು ಅಥವಾ ಅವಲೋಕಿಸಲು ಸಾಧ್ಯವಾಗುವುದಿಲ್ಲ. 'ಆಕಸ್ಮಿಕ ಸಾಕ್ಷೀದಾರರು' ಎಂಬ ಪದಾವಳಿಯನ್ನು, ಪ್ರತಿಯೊಬ್ಬ ವ್ಯಕ್ತಿಯ ಮನೆಯನ್ನೂ, ಆತನ ಕೋಟೆಯೆಂದು ಪರಿಗಣಿಸಿ, ಪ್ರತಿಯೊಬ್ಬನೂ ಆತನ ಕೋಟೆ ಮನೆಯನ್ನು ಬಿಟ್ಟು ಬೇರೆ ಕಡೆ ಅಥವಾ ಮತ್ತೊಬ್ಬ ವ್ಯಕ್ತಿಯ ಕೋಟೆ ಮನೆಯಲ್ಲಿದ್ದರೆ ಅದಕ್ಕೆ ವಿವರಣೆ ನೀಡಬೇಕಾದ ದೇಶಗಳಿಂದ ಪಡೆದುಕೊಳ್ಳ ಲಾಗಿರುತ್ತದೆ. ಇದು ಕಡಿಮೆ ಔಪಚಾರಿಕತೆ ಹಾಗು ಹೆಚ್ಚು ಸಹಜವಾಗಿರುವಂಥ ದೇಶಗಳಲ್ಲಿ ಹೊಂದಾಣಿಕೆಯಾಗದ ಪದಾವಳಿಯಾಗಿರುತ್ತದೆ. ಕೊಲೆಯು ರಸ್ತೆಯಲ್ಲಿ ನಡೆದಿದ್ದರೂ ಕೂಡ, ದಾರಿಹೋಕರು ಹಾಗೂ ಬೀದಿ ವ್ಯಾಪಾರಿಗಳನ್ನು 'ಆಕಸ್ಮಿಕ ಸಾಕ್ಷಿ'ಯೆಂಬ ಆಧಾರದ ಮೇಲೆ ಬಿಟ್ಟುಬಿಡುವುದಾದರೆ, ಒಂದು ಸೂಕ್ಷ್ಮ ಪ್ರಜ್ಞೆಯನ್ನು ಕಳೆದುಕೊಂಡಂತಾಗುತ್ತದೆ ಹಾಗೂ ಗುರುತರವಾದ ಸಾಕ್ಷ್ಯವನ್ನು ಹಗುರವಾಗಿ ಪರಿಗಣಿಸಿದಂತಾಗುತ್ತದೆ.

17. ವಿಷಯದ ಈ ಹಿನ್ನೆಲೆಯಲ್ಲಿ, ಪ್ರಾ.ಸಾ. 3 ಮತ್ತು 5ರ ಸಾಕ್ಷ್ಯಗಳನ್ನು ಉದಾಹರಿಸಬಹುದೆಂಬುದು ಸ್ಪಷ್ಟವಾಗಿರುತ್ತದೆ. ಆದಾಗ್ಯೂ, ಈ ವಾದದ ಉದ್ದೇಶಕ್ಕಾಗಿ ಪ್ರಾ.ಸಾ. 3 ಮತ್ತು 5ರ ಸಾಕ್ಷ್ಯವನ್ನು ಅಲಕ್ಷಿಸಿದ್ದಾಗ್ಯೂ, ಪ್ರಾಸಿಕ್ಯೂಷನ್, ಪ್ರಾ.ಸಾ. 1ರ ಸಾಕ್ಷ್ಯದ ಮೂಲಕ ಸಂದರ್ಭವನ್ನು ರುಜುವಾತುಪಡಿಸಿರುತ್ತದೆಂಬುದನ್ನು ಮತ್ತೊಮ್ಮೆ ನಾವು ಪುನರುಚ್ಚರಿಸಿರುತ್ತೇವೆ.

ಮುಂದುವರೆದು, ಅಪರಾಧ ಸ್ಥಳದ ಪಂಚನಾಮೆ (ನಿಶಾನೆ ಪಿ. 2) ಮತ್ತು ಪ್ರಾ.ಸಾ. 1ರ ಸಾಕ್ಷ್ಯಗಳು ಪ್ರಾಸಿಕ್ಯೂಷನ್‌ನ ವಾದವನ್ನು ಪುಷ್ಟೀಕರಿಸಿರುತ್ತವೆ. ಪ್ರತ್ಯಕ್ಷ ಸಾಕ್ಷ್ಯಗಳಾದ ಅಂದರೆ, ಪ್ರಾ.ಸಾ. 1, 2 ಮತ್ತು 20 ಇವರ ಸಾಕ್ಷ್ಯ ಹಾಗೂ ನಿಶಾನೆ ಪಿ.2, ಅಪರಾಧ ನಡೆದ ಸ್ಥಳದಲ್ಲಿ ಮೃತ ವ್ಯಕ್ತಿಯ ಚಿನ್ನದ ಸರ

ಹಾಗು ಕೈಗಡಿಯಾರ ಬಿದ್ದಿದ್ದವೆಂಬುದನ್ನು ಹಾಗೂ ಗಡಿಯಾರದ ಬೆಲ್ಟು ಚೂರು ಚೂರಾಗಿತ್ತೆಂಬುದನ್ನು ಸ್ಪಷ್ಟಪಡಿಸುತ್ತವೆ. ಮೃತ ವ್ಯಕ್ತಿಯ ಮೊಬೈಲ್ ಫೋನು (ಎಂ.ಒ.3) ಸ್ಥಳದಲ್ಲಿ ಬಿದ್ದಿತ್ತು. ಆಪಾದಿತರು ತಮ್ಮ ಆಯುಧಗಳನ್ನು ಬಚ್ಚಿಟ್ಟುಕೊಂಡು ತಂದಿದ್ದ ರಕ್ತದ ಕಲೆಗಳಾಗಿದ್ದ ಚೀಲ (ಎಂ.ಒ.1) ಕೂಡ ಸದರಿ ಸ್ಥಳದಲ್ಲಿಯೇ ಬಿದ್ದಿತ್ತು. ಮಚ್ಚಿನ ಹಾಗೂ ಅವರುಗಳ ಮೋಟಾರು ಸೈಕಲಿನ (ಮೃತ ವ್ಯಕ್ತಿಯ ಮೋಟಾರು ಸೈಕಲನ್ನೂ ಒಳಗೊಂಡಂತೆ) ಚೂರುಗಳನ್ನು ಮೃತ ವ್ಯಕ್ತಿಯ ಚಪ್ಪಲಿಗಳ ಜೊತೆಗೆ ಅಭಿಗ್ರಹಣ ಮಾಡಿಕೊಳ್ಳಲಾಗಿತ್ತು. ನಿಜವಾಗಿಯೂ ಆ ಸ್ಥಳಕ್ಕೆ ಆಪಾದಿತರು ಬರದಿದ್ದರೆ, ಅವರ ಮೋಟಾರು ಸೈಕಲುಗಳು (ಎಂ.ಒ. 9 ಮತ್ತು 10) ಸದರಿ ಸ್ಥಳದಲ್ಲಿ ಕಂಡುಬರುತ್ತಿರಲಿಲ್ಲ. ಹಾಗಾಗಿ, ನಿಶಾನೆ ಪಿ.2 (ಅಪರಾಧ ಸ್ಥಳದ ಪಂಚನಾಮೆ) ಪ್ರಾ.ಸಾ. 1ರ ಸಾಕ್ಷ್ಯಕ್ಕೆ ಪೂರಕವಾಗಿರುತ್ತದೆ ಹಾಗೂ ತನಿಖಾಧಿಕಾರಿಯು, ಅಪರಾಧ ನಡೆದ ಸ್ಥಳದ ಹಾಗೂ ಅಭಿಗ್ರಹಣ ಮಾಡಿರುವ ವಸ್ತುಗಳಿಗೆ ಸಂಬಂಧಿಸಿದ ಪಂಚನಾಮ (ನಿಶಾನೆ ಪಿ. 10)ಕ್ಕೆ ಸಂಬಂಧಿಸಿದ ಪ್ರಾಸಿಕ್ಯೂಷನ್ ವಾದವನ್ನು ಸಂಪೂರ್ಣವಾಗಿ ಬೆಂಬಲಿಸಿರುತ್ತಾರೆ.

ಮೃತ ವ್ಯಕ್ತಿಯ ರಕ್ತದ ಕಲೆಗಳಿದ್ದ ಬಟ್ಟೆಗಳು, ಆಪಾದಿತರಿಂದ ವಶಪಡಿಸಿಕೊಂಡಿದ್ದ ರಕ್ತದ ಕಲೆಯಿರುವ ಮಾರಕಾಸ್ತ್ರಗಳು ಹಾಗೂ ಸ್ಥಳದಲ್ಲಿ ಬಿದ್ದಿದ್ದ ರಕ್ತದ ಕಲೆಯಿರುವ ಮುರಿದ ಮಚ್ಚುಗಳನ್ನು ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ ಪರೀಕ್ಷೆಗಾಗಿ ಕಳುಹಿಸಲಾಗಿತ್ತು. ಅಲ್ಲದೆ, ಆಪಾದಿತರ ರಕ್ತದ ಕಲೆಯಿದ್ದ ಬಟ್ಟೆಗಳನ್ನು ಸಹ ಪರೀಕ್ಷೆಗಾಗಿ ಕಳುಹಿಸಲಾಗಿತ್ತು. ನಿಶಾನೆ ಪಿ. 16 ವಿಧಿವಿಜ್ಞಾನ ಪ್ರಯೋಗಾಲಯದ ಹಾಗೂ ಸೀರಮ್ ಶಾಸ್ತ್ರಜ್ಞನ ವರದಿಯಾಗಿರುತ್ತದೆ. ಸದರಿ ವರದಿಯು, ಮೃತ ವ್ಯಕ್ತಿಯ ಬಟ್ಟೆಯ ಮೇಲಿದ್ದ ರಕ್ತದ ಕಲೆ, ಆಪಾದಿತರ ಬಟ್ಟೆ ಮೇಲಿದ್ದ ರಕ್ತದ ಕಲೆ, ವಶಪಡಿಸಿಕೊಂಡಿರುವ ಮಾರಕಾಸ್ತ್ರಗಳು ಹಾಗೂ ಸ್ಥಳದಲ್ಲಿ ಕಂಡುಬಂದ ಮಾರಕಾಸ್ತ್ರಗಳ ಚೂರುಗಳ ಮೇಲಿದ್ದ ರಕ್ತದ ಕಲೆಗಳು ಮನುಷ್ಯನ 'ಬಿ' ಗುಂಪಿನ ರಕ್ತದವಾಗಿರುತ್ತವೆಂಬುದನ್ನು ಸುಸ್ಪಷ್ಟಪಡಿಸುತ್ತದೆ. ಹಾಗಾಗಿ, ವೈಜ್ಞಾನಿಕ ಸಾಕ್ಷ್ಯವೂ ಕೂಡ ಪ್ರಾಸಿಕ್ಯೂಷನ್‌ನ ವಾದವನ್ನೇ ಸಂಪೂರ್ಣವಾಗಿ ಬೆಂಬಲಿಸುತ್ತದೆಂಬುದು ಸ್ಪಷ್ಟವಾಗುತ್ತದೆ.

18. ಮೇಲಿನದರ ಹಿನ್ನೆಲೆಯಲ್ಲಿ, ನಾವು, ಅಧಿವಿಚಾರಣಾ ನ್ಯಾಯಾಲಯವು ಆಪಾದಿತರ ಮೇಲೆ ಆರೋಪಿಸಲಾಗಿದ್ದ ಆರೋಪವನ್ನು ಸಾಬೀತುಪಡಿಸಿರುವುದು ಸಮರ್ಥನೀಯವಾಗಿದೆಯೆಂದು ಅಭಿಪ್ರಾಯ ಪಟ್ಟಿರುತ್ತೇವೆ. ದಾಖಲೆಯ ಮೇಲಿನ ಇಡೀ ಸಾಕ್ಷ್ಯವನ್ನು, ಮರು–ವಿವೇಚಿಸಿದ್ದಾಗ್ಯೂ, ಅಧಿವಿಚಾರಣಾ ನ್ಯಾಯಾಲಯವು ತಳೆದಿರುವ ತೀರ್ಮಾನವನ್ನು ಸಮ್ಮತಿಸದಿರುವ ಯಾವುದೇ ಆಧಾರ ನಮಗೆ ಕಂಡುಬಂದಿರುವುದಿಲ್ಲ. ಹಾಗಾಗಿ, ಅಪೀಲು ವಿಫಲವಾಗಿರುತ್ತದೆ ಮತ್ತು ತದನುಸಾರವಾಗಿ ಇದನ್ನು ವಜಾಗೊಳಿಸಲಾಗಿರುತ್ತದೆ.